# ಅಂತರ್ಭಾವಿ

ಡಾ. ವಿಜಯಕುಮಾರ ಎಸ್. ಕಟಗಿಹಳ್ಳಿಮಠ
ಗೌರವಾಭಿನಂದನ ಗ್ರಂಥ




ಪ್ರಧಾನ ಸಂಪಾದಕರು
ಡಾ. ಗುರುಪಾದ ಮರಿಗುದ್ದಿ

ಸಂಪಾದಕರು
ಡಾ. ಕಲ್ಲಯ್ಯ ಎಸ್. ಹಿರೇಮಠ
ಡಾ. ಎಸ್. ಡಿ. ಕೆಂಗಲಗುತ್ತಿ

# ಅಂತರ್ಭಾವಿ

## ಡಾ. ವಿಜಯಕುಮಾರ ಎಸ್. ಕಟಗಿಹಳ್ಳಿಮಠ ಅಭಿನಂದನ ಗ್ರಂಥ


ಪ್ರಧಾನ ಸಂಪಾದಕರು

**ಡಾ. ಗುರುಪಾದ ಮರಿಗುದ್ದಿ**

ಸಂಪಾದಕರು

**ಡಾ. ಕಲ್ಲಯ್ಯ ಎಸ್. ಹಿರೇಮಠ**

**ಡಾ. ಎಸ್. ಡಿ. ಕೆಂಗಲಗುತ್ತಿ**



**೨೦೨೩**

ಪ್ರಕಾಶನ

**ಡಾ. ವಿ. ಎಸ್. ಕಟಗಿಹಳ್ಳಿಮಠ ಅಭಿನಂದನ ಸಮಿತಿ**

ಬಾಗಲಕೋಟೆ

೧೩. ಕನ್ನಡದಲ್ಲಿ ವೈದ್ಯಶಾಸ್ತ್ರ ೧೨೬
• ಡಾ. ವೀಣಾ ಕಲ್ಮಠ
೧೪. ಶಾಸ್ತ್ರಗ್ರಂಥಗಳ ಚಿತ್ರಕಲೆ ೧೪೧
• ಡಾ. ಅ. ಲ. ನರಸಿಂಹನ್
೧೫. ಕನ್ನಡದಲ್ಲಿ ಮಾನಸೋಲ್ಲಾಸ : ಚಿತ್ರಕಲೆಶಾಸ್ತ್ರ ೧೫೨
• ಡಾ. ವಿಜಯಕುಮಾರ ಎಸ್. ಕಟಗಿಹಳ್ಳಿಮಠ
೧೬. ಶಿವತತ್ವ ರತ್ನಾಕರ ಚಿತ್ರಕಲೆ ೧೬೪
• ಡಾ. ಕೃಷ್ಣ ಕಟ್ಟಿ
೧೭. ಕನ್ನಡದಲ್ಲಿ ಪ್ರಪಾಶಾಲೆಗಳು ೧೭೯
• ಕೆ. ರಾಘವೇಂದ್ರರಾವ್
೧೮. ಶಾರ್ಙ್ಗದೇವನ ಸಂಗೀತರತ್ನಾಕರ ೧೮೪
• ಡಾ. ರಾ. ಸತ್ಯನಾರಾಯಣ
೧೯. ಭೋಜರಾಜನ ಶೃಂಗಾರಪ್ರಕಾಶ ೧೮೮
• ಡಾ. ರಾ. ಗಣೇಶ್
೨೦. ವಿಜ್ಞಾನೇಶ್ವರನ 'ಮಿತಾಕ್ಷರೀ ಟೀಕೆ' ೨೦೮
• ಡಾ. ವೇಣೀಮಾಧವ ಶಾಸ್ತ್ರೀ ಜೋಶಿ

## ಭಾಗ - ೨ ಕನ್ನಡ ಸಂಘ ಸಂಪದ

೨೧. ಕರ್ನಾಟಕ ಸಂಘ ರಾಯಚೂರು ೨೨೧
• ಡಾ. ಶಕುಂತಲಾ ಶೆಟ್ಟಿ
೨೨. ಕರ್ನಾಟಕ ಸಂಘ, ಮಂಡ್ಯ ೨೨೭
• ಶ್ರೀ ಪಿ. ಲೋಕೇಶ ಚಂದಗಾಲು
೨೩. ಕನ್ನಡ ಸಂಘ, ಕಾಂತಾವರ ೨೩೨
• ಡಾ. ರಾಜಶೇಖರ ಹಳೆಮನಿ
೨೪. ಕರ್ನಾಟಕ ಸಂಘ, ಶಿವಮೊಗ್ಗ ೨೩೬
• ಡಾ. ಸಂತೋಷಕುಮಾರ
೨೫. ಸಾಹಿತ್ಯ ಸಾಂಸ್ಕೃತಿಕ ಸಂಘ, ಅಥಣಿ ೨೪೩
• ಶ್ರೀ ಎನ್. ಬಿ. ಝುರೆ

೨೬. ಬಿ. ಎಂ. ಶ್ರೀ ಪ್ರತಿಷ್ಠಾನ, ಬೆಂಗಳೂರು ೨೫೧
- ಡಾ. ಶಾಂತರಾಜು

೨೭. ಕರ್ನಾಟಕ ಸಂಘ, ಮಧುರೈ ೨೬೧
- ಶ್ರೀ ಕೃಷ್ಣ ಜೋಯಿಸ

೨೮. ಕನ್ನಡ ಸಮಾಜ, ಗೋವಾ ೨೬೭
- ದ. ಮ. ಅಶ್ರಿತ

೨೯. ಕರ್ನಾಟಕ ಸಂಘ, ಪುಣೆ ೨೬೯
- ವಿಜಯೇಂದ್ರ ಕುಲಕರ್ಣಿ

೩೦. ಕನ್ನಡ ಸಮಾಜ ಗೋವಾ ೨೭೨
- ಶಾ. ಮ. ಕೃಷ್ಣರಾಯ

೩೧. ಕರ್ನಾಟಕ ಸಂಘ, ಪುತ್ತೂರು ೨೮೮
- ಡಾ. ರವಿಶಂಕರ ಜಿ. ಕೆ.

೩೨. ಕರ್ನಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು ೨೯೬
- ಡಾ. ಚಂದ್ರಶೇಖರ

೩೩. ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು ೩೦೨
- ಡಾ. ಮಂಜುಳಾ ಗೋನಾಳ

೩೪. ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ೩೦೭
- ಪ್ರೊ. ಧನವಂತ ಹಾಜವಗೋಳ

೩೫. ಕನ್ನಡ ಸಂಘ, ಮಹಾರಾಜ ಕಾಲೇಜು, ಮೈಸೂರು ೩೧೬
- ಡಾ. ಟಿ. ಕೆ. ಕೆಂಪೇಗೌಡ

೩೬. ಕರ್ನಾಟಕ ಸಾಹಿತ್ಯ ಸಂಘ, ಬಾಗಲಕೋಟೆ ೩೩೬
- ಡಾ. ಎಸ್. ಡಿ. ಕೆಂಗಲಗುತ್ತಿ

## ಭಾಗ - ೩ ಸಂಶೋಧನೆ - ವಿಮರ್ಶಾ ಸಂಪದ

೩೭. ಹರಿಹರನ ಪುಷ್ಪರಗಳೆ – ಸಸ್ಯಶಾಸ್ತ್ರೀಯ ಅಧ್ಯಯನ ೩೪೩
- ಡಾ. ಸಂಗಮೇಶ. ಎಸ್. ಗಣಿ

೩೮. ಆದಿ ಅನಾದಿ ಇಲ್ಲದಂದು ೩೪೮
- ಡಾ. ಸಂತೋಷ ಹಿರೇಮಠ

# ಬಿ. ಎಂ. ಶ್ರೀ ಪ್ರತಿಷ್ಠಾನ, ಬೆಂಗಳೂರು

● **ಡಾ. ಶಾಂತರಾಜು**, ಬೆಂಗಳೂರು

'ಯಾರನ್ನು ಯಾವ ಮಾತು, ಯಾವಾಗ ಬದಲಾಯಿಸುತ್ತದೋ ಕಂಡವರಾರು' 'ದೇಶದಲ್ಲಿ ಹುಳು ತಿಂದುಹೋಗದೆ ಇರುವ ಗ್ರಂಥಗಳನ್ನೆಲ್ಲ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕುವುದು, ಅಚ್ಚಾದ ಮೇಲೆ ಎಲ್ಲವನ್ನು ಕೊನೆಮುಟ್ಟ ಶೋಧಿಸಿ ಹೊಸದಾಗಿ ಲಕ್ಷಣಗ್ರಂಥಗಳನ್ನು ಕಾಲಕಾಲಕ್ಕೆ ತಕ್ಕಂತೆ ರಚಿಸುವುದು' ಎಂದು ಕನ್ನಡದ ಕಣ್ವ, ಹೊಸಗನ್ನಡ ಸಾಹಿತ್ಯದ ಯುಗಪುರುಷ ಬಿ.ಎಂ.ಶ್ರೀಕಂಠಯ್ಯ ಅವರು ೧೯೧೧ ರಲ್ಲಿ ನುಡಿದ ವಾಣಿಯನ್ನು ಅಕ್ಷರಶಃ ಪಾಲಿಸಲು ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಅಳಿಸಿಹೋಗುತ್ತಿರುವ ಸಂಶೋಧಕ ಪ್ರವೃತ್ತಿಯನ್ನು ಉಳಿಸಿ ಬೆಳೆಸುವ ಸಲುವಾಗಿ ಬಿ.ಎಂ.ಶ್ರೀಯವರನ್ನು ಆರಾಧಿಸುವ ಪ್ರೀತಿಯ ಶಿಷ್ಯರಾದ ಎಂ.ವಿ.ಸೀತಾರಾಮಯ್ಯ ಅವರು ತಮ್ಮ ಗುರುಗಳ ಹೆಸರಿನಲ್ಲಿ ಮೇ ೬ ೧೯೭೯ರಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಸಭೆ ಸೇರಿ ಸರ್ವಾನುಮತದಿಂದ ಒಪ್ಪಿಗೆ ಪಡೆದು ಸ್ಥಾಪಿಸಿದ ಸಂಸ್ಥೆಯೇ ಬಿ.ಎಂ.ಶ್ರೀ. ಪ್ರತಿಷ್ಠಾನ.ಎಂ.ವಿ.ಸೀ. ಅವರ ದೇಹಪ್ರಕೃತಿ ಅಷ್ಟು ಚೆನ್ನಾಗಿಲ್ಲದಿದ್ದರೂ ಮತ್ತು ಕಾರ್ಯ ಬಾಹುಳ್ಯವಿದ್ದರೂ ಪತ್ರ ಬರೆಯಲು ಪ್ರಾರಂಭಿಸಿದರು. ೧೯೭೯ ಏಪ್ರಿಲ್ ತಿಂಗಳಿನಲ್ಲಿ ಬಿ.ಸಿ. ರಾಮಚಂದ್ರಶರ್ಮ ಅವರು ಇಂಗ್ಲೆಂಡಿನಿಂದ ಒಂದು ಪೋರ್ಟಬಲ್ ಟೈಪ್‌ರೈಟರ್ ಕಳುಹಿಸಿಕೊಟ್ಟರು. ಸಮಾನ ಮನಸ್ಕರನ್ನು ಒಟ್ಟುಗೂಡಿಸಿ ಔಪಚಾರಿಕ ಸಭೆ ನಡೆಸಿ ಕನ್ನಡಕ್ಕೆ ಸಂಬಂಧಿಸಿದಂತೆ ವಿವಿಧ ಜ್ಞಾನಶಾಖೆಗಳಲ್ಲಿ ಸಂಶೋಧನೆಯನ್ನು ಪ್ರೋತ್ಸಾಹಿಸುವುದು, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ವ್ಯಾಕರಣ, ಶಾಸನಾಧ್ಯಯನ, ನಿಘಂಟುಶಾಸ್ತ್ರ, ಭಾಷಾವಿಜ್ಞಾನ, ಸಾಹಿತ್ಯ ವಿಮರ್ಶೆ ಮುಂತಾದ ಶಾಖೆಗಳಲ್ಲಿ ಅಧ್ಯಯನದಲ್ಲಿ ತೊಡಗುವುದು, ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಸಂಗ್ರಹ, ದತ್ತಿಗಳನ್ನು ಸ್ಥಾಪಿಸುವುದು, ಪ್ರಶಸ್ತಿ ಪ್ರದಾನ ಮಾಡುವುದು, ಗೌರವ ಸದಸ್ಯತ್ವ ನೀಡುವುದು, ಸಮಾನಾಸಕ್ತಿ ಹೊಂದಿರುವ ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಂಘಟನೆಗಳೊಂದಿಗೆ ಕೈಜೋಡಿಸಿ ಕಾರ್ಯನಿರ್ವಹಿಸುವುದು, ಗ್ರಂಥಭಂಡಾರ ಸ್ಥಾಪನೆ ಮತ್ತು ಮೇಲಿನ ಆಶೋತ್ತರಗಳಿಗೆ ಪೂರಕವಾದ ಯೋಜನೆಗಳನ್ನು ರೂಪಿಸುವುದು ಬಹುಮುಖ್ಯ ಆಶಯವಾಗಿ, ಕರ್ನಾಟಕದ ನಿವೃತ್ತ ಮುಖ್ಯ ನ್ಯಾಯಾಧೀಶರಾದ ನಿಟ್ಟೂರು ಶ್ರೀನಿವಾಸರಾವ್ ಅವರು ಅಧ್ಯಕ್ಷರಾಗಿ, ಪ್ರೊ. ಎಂ.ವಿ. ಸೀ. ಸಂಸ್ಥಾಪಕ ಕಾರ್ಯದರ್ಶಿ ಹಾಗೂ ಡಾ. ಕೆ. ಆರ್. ಗಣೇಶಕೋಶಾಧಿಕಾರಿ, ಪ್ರೊ. ಕೆ.ಎಸ್. ಮಧುಸೂದನ, ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ, ಪ್ರೊ. ಜಿ. ವೆಂಕಟಸುಬ್ಬಯ್ಯ, ಡಾ. ಎಂ.ಎಂ. ಕಲಬುರ್ಗಿ, ಡಾ. ಎಂ.

ಕೃಷ್ಣರಾವ್, ಡಾ.ಕೆ. ಕುಶಾಲಪ್ಪಗೌಡ, ಶ್ರೀ ಗೊರುರು ರಾಮಸ್ವಾಮಿ ಅಯ್ಯಂಗಾರ್, ಶ್ರೀ ಡಿ. ಪಿ. ಕೆ. ಮೂರ್ತಿ, ಪ್ರೊ. ಸಿ.ಎನ್. ಮಂಗಳ ಮತ್ತು ಚಿದಾನಂದಮೂರ್ತಿ ಅವರುಗಳು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪ್ರಾರಂಭಿಸಿದ ಸಂಸ್ಥೆಯೇ ಬಿ.ಎಂ.ಶ್ರೀ. ಪ್ರತಿಷ್ಠಾನ.

ಮಾಸ್ತಿ ವೆಂಕಟೇಶ ಅಯ್ಯಂಗಾರರು ಮಹಾಪೋಷಕರಾಗಿ, ನಿಟ್ಟೂರು ಶ್ರೀನಿವಾಸರಾವ್ ಅವರು ಅಧ್ಯಕ್ಷರಾಗಿ, ಎಂ.ವಿ.ಸೀ. ಅವರು ಸಂಸ್ಥಾಪಕ ಕಾರ್ಯದರ್ಶಿ ಮತ್ತು ಗೌರವ ಕೋಶಾಧಿಕಾರಿಯಾಗಿ ಮತ್ತು ವಿವಿಧ ಕ್ಷೇತ್ರಗಳ ಮಾನ್ಯರಾದ ೧೩ ಸದಸ್ಯರೊಂದಿಗೆ ರೂಪುಗೊಂಡ ಈ ಪ್ರತಿಷ್ಠಾನವು ಮಾರ್ಚ್ ೧೧. ೧೯೮೦ರಲ್ಲಿ ಬಿ.ಎಂ.ಶ್ರೀ. ಅವರ ನೆಚ್ಚಿನ ಶಿಷ್ಯರಾದ ರಾಷ್ಟ್ರಕವಿ ಕುವೆಂಪು ಅವರಿಂದ ಉದ್ಘಾಟನೆಯಾಗಿ ಕಾರ್ಯೋನ್ಮುಖವಾಯಿತು. ೮.೧೧.೧೯೮೦ರವರೆಗೆ ಮಾನ್ಯ ಶ್ರೀ ನಿಟ್ಟೂರು ಶ್ರೀನಿವಾಸರಾವ್, ಮಾಸ್ತಿ ವೆಂಕಟೇಶಯ್ಯಂಗಾರ್ ಮತ್ತು ಎಂ.ವಿ.ಸೀ. ಅವರು ತಮ್ಮ ಸಾಮರ್ಥ್ಯವನ್ನು ಉಪಯೋಗಿಸಿ ಸರ್ಕಾರದಿಂದ ಬಾಡಿಗೆ ನಿವೇಶನ ಪಡೆಯುವುರಲ್ಲಿ ಯಶಸ್ವಿಯಾಗಿ, ಅಲ್ಲಿ ಕನ್ನಡ ಗುಡಿಸಲನ್ನು ನಿರ್ಮಿಸಿ ವಿವಿಧ ವಲಯಗಳಲ್ಲಿ ಸೇವೆ ಮಾಡಲು ದಾರಿಮಾಡಿಕೊಟ್ಟರು, ಸಾತ್ವಿಕರ ನಿಷ್ಠೆ ಎಂದೆಂದಿಗೂ ಫಲಕೊಡದೆ ಇರದು ಎಂಬ ಮಾತಿನಂತೆ.

ಪ್ರವರ್ತಕರ ಅನಂತರದಲ್ಲೂ ಅತ್ಯಂತ ಯಶಸ್ವಿಯಾಗಿ ಮುನ್ನಡೆಯಾಗುತ್ತಿರುವ ವಿರಳ ಸಂಸ್ಥೆಯಾಗಿ ಈ ಪ್ರತಿಷ್ಠಾನವು ೪೩ ವಸಂತಗಳನ್ನು ಪೂರೈಸಿದೆ. ಸಂಸ್ಥೆ ನಿಟ್ಟೂರು ಶ್ರೀನಿವಾಸರಾವ್, ಪ್ರೊ. ಎಂ.ವಿ.ಸೀತಾರಾಮಯ್ಯ, ಪ್ರೊ. ಎಲ್.ಎಸ್. ಶೇಷಗಿರಿರಾವ್, ಶ್ರೀ ಎನ್. ಬಸವಾರಾಧ್ಯ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಪ್ರೊ. ಚಿ. ಶ್ರೀನಿವಾಸರಾಜು, ಡಾ. ಪಿ.ವಿ.ನಾರಾಯಣ, ಪ್ರೊ. ಡಿ. ಲಿಂಗಯ್ಯ, ಡಾ. ಆರ್. ಲಕ್ಷ್ಮೀನಾರಾಯಣ, ೨೦೨೧ ರಿಂದ ಪ್ರಸ್ತುತ ಡಾ. ಬೈರಮಂಗಲ ರಾಮೇಗೌಡ ಅವರ ಅಧ್ಯಕ್ಷತೆಯಲ್ಲಿ, ಪ್ರೊ. ಎಂ.ವಿ.ಸೀತಾರಾಮಯ್ಯ, ಶ್ರೀ ಗೋವಿಂದ ಅ. ಜಾಲಿಹಾಳ, ಪ್ರೊ. ಕೆ.ಎಸ್. ಮಧುಸೂಧನ, ಡಾ. ಕೆ.ಆರ್. ಗಣೇಶ್, ಪ್ರೊ. ದೊಡ್ಡರಂಗೇಗೌಡ, ಶ್ರೀ ಎಂ.ವಿ. ಸತ್ಯನಾರಾಯಣ, ಶ್ರೀ ಜಿ.ಎನ್. ವೆಂಕಟರಾಜು, ಪ್ರೊ. ನಾ. ಗೀತಾಚಾರ್ಯ , ಶ್ರೀ ಜಿ. ಚೆನ್ನವೀರಸ್ವಾಮಿ, ಶ್ರೀ ಎಸ್.ವಿ. ಶ್ರೀನಿವಾಸರಾವ್, ಪ್ರೊ. ಜಿ. ಅಬ್ದುಲ್ ಬಷೀರ್, ಶ್ರೀ ಬಿ.ಆರ್. ರವೀಂದ್ರನಾಥ್, ಡಾ. ವಿಜಯಾ ಸುಬ್ಬರಾಜ್, ಡಾ. ಹೆಚ್.ಎಸ್.ಎಂ. ಪ್ರಕಾಶ್, ಡಾ. ಬಿ.ಸಿ. ರಾಜಕುಮಾರ್, ಪ್ರಸ್ತುತ೨೦೨೨ ರಿಂದ ಡಾ. ಶಾಂತರಾಜು ಗೌರವ ಕಾರ್ಯದರ್ಶಿಗಳಾಗಿ, ಪ್ರೊ. ಎಂ.ವಿ.ಸೀತಾರಾಮಯ್ಯ, ಡಾ. ಪಿ.ವಿ.ನಾರಾಯಣ, ಶ್ರೀ ಎನ್.ಎಸ್. ರಾಮಸ್ವಾಮಿ ಅಯ್ಯರ್, ಶ್ರೀ ಕೆ. ರಾಜಾರಾವ್, ಡಾ. ಕೆ.ಆರ್. ಗಣೇಶ್, ಪ್ರೊ. ಡಿ.ಲಿಂಗಯ್ಯ, ಶ್ರೀ ಎಸ್.ಟಿ. ರಾಧಾಕೃಷ್ಣ, ಶ್ರೀ ಎಂ.ಎಸ್. ರಾಮಪ್ರಸಾದ್, ಡಾ.ಎಸ್. ಅನಿಲ್‌ಕುಮಾರ್, ಪ್ರಸ್ತುತ ೨೦೨೨ರಿಂದ ಡಾ. ಪ್ರಭಾಕರ ಬೆಲವಾಡಿ ಅವರು ಖಜಾಂಚಿಯಾಗಿ ಮೂಲ ಆಶಯಕ್ಕೆ ಅನುಗುಣವಾಗಿ ಸಂಸ್ಥೆಯ ವರ್ಚಸ್ಸನ್ನು ನಾಡಿನ ಉದ್ದಗಲಕ್ಕೂ ವಿಸ್ತರಿಸುತ್ತಾ ಸಾಗಿರುವುದು ಅಭಿನಂದನಾರ್ಹವಾಗಿದೆ.

ಪ್ರೊ. ಎಂ.ವಿ.ಸೀತಾರಾಮಯ್ಯ ಅವರ ತನು,ಮನ, ಧನ ಮತ್ತು ಪರಿಶ್ರಮದಿಂದ ಆರಂಭಗೊಂಡ ಈ ಸಂಸ್ಥೆಯ ನಿವೇಶನದಲ್ಲಿ ಸಂಸದರ ನಿಧಿ ಮತ್ತು ಸಂಸ್ಕೃತಿ ಪೋಷಕ ದಾನಿಗಳ ನೆರವಿನಿಂದ ೨೦೦೦ನೇ ಇಸವಿಯಲ್ಲಿ ಸ್ವಂತ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಗಿ ಮೂರು ಮಹಡಿಗಳ ಭವ್ಯ ಕಟ್ಟಡದಲ್ಲಿ ಎಂ.ವಿ.ಸೀ. ಸಭಾಂಗಣ, ಗ್ರಂಥಾಲಯ, ತಿಮ್ಮಪ್ಪದಾಸ ಪ್ರಾಚೀನ ಹಸ್ತಪ್ರತಿ ಸಂಗ್ರಹಾಲಯ, ಉಪನ್ಯಾಸ ಕೊಠಡಿಗಳ ನಿರ್ಮಾಣವಾಗಿ ೧೩.೯.೨೦೦೪ರಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಧರಂಸಿಂಗ್ ಅವರಿಂದ ಉದ್ಘಾಟನೆಯಾಯಿತು. ನಂತರ ಬಿ.ಎಂ.ಶ್ರೀ. ಅವರ ಮೊಮ್ಮಗಳೂ, ಶಾ.ಬಾಲುರಾವ್ ಅವರ ಧರ್ಮಪತ್ನಿಯೂ ಆದ ಶ್ರೀಮತಿಕಮಲಿನಿ ಶಾ.ಬಾಲುರಾವ್ ಅವರ ಸಹಾಯದಿಂದ ಶಾ. ಬಾಲುರಾವ್

ಮಾತಿನ ಮನೆ. ಲಿಫ್ಟ್ ನಿರ್ಮಾಣವಾಯಿತು. ಹಳಗನ್ನಡ ತರಗತಿಗಳನ್ನು ನಡೆಸುವಾಗ ಆಸಕ್ತಿಯಿಂದ ಅಧ್ಯಯನ ಮಾಡಲು ಸೇರಿಕೊಂಡ ಶ್ರೀಮತಿ ಸುಧಾಮೂರ್ತಿಯವರೂ ಧನಸಹಾಯ ಮಾಡಿದ್ದಾರೆ. ಅಲ್ಲದೆ ವಿದ್ಯಾರ್ಥಿಗಳೇ ಮುಂದಿನ ತರಗತಿಗಳಿಗೆ ಉಪಯೋಗವಾಗಲೆಂದು ಡೆಸ್ಕ್‌ಗಳನ್ನು ದಾನವಾಗಿ ನೀಡಿರುವುದನ್ನು ಸ್ಮರಿಸಬಹುದು. ಸರ್ಕಾರದ ಧನಸಹಾಯದಿಂದ ಸುಸಜ್ಜಿತ ಕಚೇರಿ ನಿರ್ಮಾಣವಾಗಿದೆ. ೧೯೮೨ರಲ್ಲಿ ಪ್ರತಿಷ್ಠಾನದ ಮುಖ್ಯ ಚಟುವಟಿಕೆಗಳಲ್ಲಿ ಒಂದಾಗಿ ಆರಂಭವಾದ 'ಕರ್ನಾಟಕ ಲೋಚನ' ಷಾಣ್ಮಾಸಿಕ ಪತ್ರಿಕೆ ಕನ್ನಡದಲ್ಲಿ ಬರುತ್ತಿರುವ ಕೆಲವೇ ಸಂಶೋಧನಾತ್ಮಕ ನಿಯತಕಾಲಿಕೆಗಳಲ್ಲಿ ಒಂದಾಗಿ ಸಂಶೋಧನಾ ಕ್ಷೇತ್ರದ ವಿವಿಧ ಶಾಖೆಗಳಲ್ಲಿ ನುರಿತ ವಿದ್ವಾಂಸರಿಂದ ಲೇಖನಗಳು, ಟಿಪ್ಪಣಿಗಳು, ವಿಮರ್ಶೆಗಳನ್ನು ಪಡೆದು ಪ್ರಕಟಿಸುವುದರ ಮೂಲಕ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ನಿರಂತರವಾಗಿ ಪ್ರಕಟವಾಗುತ್ತಿರುವ ಈ ವಿದ್ವತ್ ಪತ್ರಿಕೆಗೆ ಸದಸ್ಯರಾಗಲು ಬಯಸುವವರು ಒಟ್ಟು ೩,೬೦೦/-ಗಳನ್ನು ಪಾವತಿಸಿದರೆ, (ಸದಸ್ಯತ್ವ ೨,೦೦೦/- ಮತ್ತು ಲೋಚನ ಮತ್ತು ಹೊಂಗನಸು ಚಂದಾ ೧,೬೦೦/-)ಈ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಈಗ ಪತ್ರಿಕೆಯನ್ನು ISBN ಗೆ ನೋಂದಾಯಿಸುವ ಪ್ರಯತ್ನ ಮಾಡುತ್ತಿದ್ದು ಅದಕ್ಕೆ ಅನುಗುಣವಾಗಿ 'ಕರ್ನಾಟಕ ಲೋಚನ' ಹೆಸರನ್ನು ಮುಂದುವರಿಸುವ ಸಾಧ್ಯತೆ ಇಲ್ಲದಿರುವುದರಿಂದ ಬೇರೊಂದು ಉತ್ತಮ ಹೆಸರಿನೊಂದಿಗೆ ತನ್ನ ಅನುಕೂಲಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ಈ ವಿದ್ವತ್ ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಪ್ರೊ. ಜಿ.ವೆಂಕಟಸುಬ್ಬಯ್ಯ ಅವರು ೧೯೮೩ರಿಂದ ೧೯೮೮ರ ವರೆಗೆ ಸೇವೆ ಸಲ್ಲಿಸಿದರೆ, ವ್ಯವಸ್ಥಾಪಕ ಸಂಪಾದಕರಾಗಿ ಎಂ.ವಿ.ಸೀತಾರಾಮಯ್ಯ ಅವರು ೧೯೮೮ ರಿಂದ ೧೯೯೦ರವರೆಗೆ ಮತ್ತು ಡಾ.ನಾ. ಗೀತಾಚಾರ್ಯ ಅವರು ೧೯೯೦ರಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಸಂಪಾದಕರಾಗಿ ಶ್ರೀ ಟಿ.ಆರ್. ಮಹಾದೇವಯ್ಯ, ಶ್ರೀ ಟಿ. ಕೇಶವಭಟ್ಟ, ಶ್ರೀ ಎಸ್.ವಿ. ಶ್ರೀನಿವಾಸರಾವ್, ಡಾ. ಎಸ್. ಸುಬ್ರಹ್ಮಣ್ಯ, ಪ್ರೊ. ಜಿ. ಅಬ್ದುಲ್ ಬಷೀರ್(ಎರಡು ಬಾರಿ), ಡಾ. ಎಚ್. ಶಶಿಕಲಾ, ಡಾ. ಎಚ್. ಎನ್. ಮುರಳೀಧರ, ಡಾ.ಬಿ.ಪಿ. ವೀರೇಂದ್ರಕುಮಾರ್ ಮತ್ತು ಪ್ರಸ್ತುತ ಜುಲೈ-೨೦೨೧ ರಿಂದ ಪ್ರೊ. ಚಂದ್ರಶೇಖರ್ ನಾದೂರು ಅವರು ಶ್ರದ್ಧೆಯಿಂದ ಪತ್ರಿಕೆಯನ್ನು ಹೊರತರುತ್ತಿದ್ದಾರೆ. ಪ್ರತಿ ತಿಂಗಳೂ ಪ್ರತಿಷ್ಠಾನದ ಮುಖವಾಣಿಯಾಗಿ, ವಾರ್ತೆಯನ್ನು ಬಿತ್ತರಿಸುವ 'ಹೊಂಗನಸು' ಶ್ರೀ ಬಿ.ಆರ್. ರವೀಂದ್ರನಾಥ್ ಅವರ ಸಂಪಾದಕತ್ವದಲ್ಲಿ ಸಕಾಲಕ್ಕೆ ಹೊರಬರುತ್ತಿದ್ದು ಇದರಲ್ಲಿ ಕನ್ನಡ ಸಾಹಿತಿಗಳ ವಿವರ, ವಿಶೇಷ ಸಾಧಕರ ಪರಿಚಯ, ಅಭಿನಂದನೆ, ಶ್ರದ್ಧಾಂಜಲಿ, ಸಾಧನೆ, ಮುಂದಿನ ತಿಂಗಳ ಕಾರ್ಯಕ್ರಮಗಳ ವಿವರ ಮತ್ತು ಹಿಂದಿನ ತಿಂಗಳ ಕಾರ್ಯಕ್ರಮಗಳ ವರದಿ, ಜತೆಗೆ ವಿಶೇಷ ಕಾಲಂಗಳಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯ ವಿಚಾರಗಳು ಪ್ರಕಟವಾಗುತ್ತಿವೆ.

ಹಂಪಿ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದು ಎಂ.ವಿ.ಸೀ. ಸಂಶೋಧನಾ ಕೇಂದ್ರವನ್ನು ೨೦೦೩-೦೪ ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಿ ಸಂಶೋಧನಾ ಕ್ಷೇತ್ರಕ್ಕೂ ತನ್ನ ಸೇವೆಯನ್ನು ವಿಸ್ತರಿಸಿಕೊಂಡು ಈಗಾಗಲೇ ಅನೇಕರನ್ನು ಎಂ.ಫಿಲ್. ಮತ್ತು ಪಿಎಚ್.ಡಿ. ಅಧ್ಯಯನ ನಡೆಸಲು ಅನುವು ಮಾಡಿಕೊಟ್ಟಿದೆ. ಈ ಕೆಳಕಂಡ ಎಲ್ಲಾ ಹಿರಿಯ ವಿದ್ವಾಂಸರುಗಳ ಮಾರ್ಗದರ್ಶನದಲ್ಲಿ ಇಲ್ಲಿಯವರೆಗೆ ೧೯ ಪಿಎಚ್.ಡಿ. ವಿದ್ಯಾರ್ಥಿಗಳು ಮಹಾಪ್ರಬಂಧ ಸಲ್ಲಿಸಿ ಡಾಕ್ಟರೇಟ್ ಪಡೆದಿದ್ದಾರೆ. ಈ ಶೈಕ್ಷಣಿಕ ಸಾಲಿನಲ್ಲಿ ೫ ವಿದ್ಯಾರ್ಥಿಗಳು ಸಲ್ಲಿಸಿದ್ದಾರೆ.

ಪ್ರೊ. ಹೆಚ್.ಎಸ್. ಹರಿಶಂಕರ್, ಪ್ರೊ. ಚಿ. ಶ್ರೀನಿವಾಸರಾಜು, ಡಾ. ಕೆ.ಆರ್. ಗಣೇಶ್, ಶ್ರೀ ಚಂದ್ರಶೇಖರ ಆರಾಧ್ಯ ಹೆಚ್.ವಿ., ಡಾ. ಕೆ.ವಿ. ಶ್ರೀನಿವಾಸಮೂರ್ತಿ, ಪ್ರೊ. ಅಶ್ವತ್ಥನಾರಾಯಣ ಜಿ., ಡಾ.ಕೆ.ಪಿ.ಭಟ್, ಪ್ರೊ. ಶ್ರೀನಿವಾಸ ಶರ್ಮ, ಡಾ. ವಿಜಯಾಸುಬ್ಬರಾಜ್, ಡಾ.ಕೆ.ಎಲ್. ಗೋಪಾಲಕೃಷ್ಣಯ್ಯ, ಡಾ. ಮಧುಸೂದನ್. ಕೆ.ಎಸ್., ಡಾ.ನಾ. ಗೀತಾಚಾರ್ಯ, ಡಾ.ಪಿ.ವಿ.ನಾರಾಯಣ, ಡಾ.ಎಚ್.ಎಸ್. ರಾಘವೇಂದ್ರರಾವ್, ಪ್ರೊ.

ಎಂ.ಎಚ್.ಕೃಷ್ಣಯ್ಯ, ಪ್ರೊ. ಡಿ. ಲಿಂಗಯ್ಯ, ಡಾ. ಕೃಷ್ಣಪರಮೇಶ್ವರ ಭಟ್ಟ, ಡಾ. ಆರ್. ಲಕ್ಷ್ಮೀನಾರಾಯಣ, ಡಾ.ಕೆ. ರಮಾನಂದ, ಡಾ. ಪ್ರಸಾದ್ ಸ್ವಾಮಿ, ಡಾ. ಲೋಕೇಶ್ವರಪ್ಪ, ಡಾ. ಎಚ್.ಎ. ಸತ್ಯವತಿ, ಡಾ. ಶಾಂಭವಿ, ಡಾ. ಶೀಲಾದೇವಿ ಎಸ್. ಮಳಿಮಠ್, ಡಾ. ಬಿ.ಎ. ಅನ್ನದಾನೇಶ್, ಡಾ.ಬಿ.ಸಿ. ರಾಜಕುಮಾರ್, ಡಾ. ಪುಟ್ಟಸ್ವಾಮಿ ಕಲ್ಲುದೇವರಹಳ್ಳಿ, ಡಾ. ಮುತ್ತೇಗೌಡ ಟಿ.ಎನ್., ಡಾ. ಕೋ.ವೆಂ. ರಾಮಕೃಷ್ಣೇಗೌಡ ಮುಂತಾದ ಗಣ್ಯ ವಿದ್ವಾಂಸರ ಮಾರ್ಗದರ್ಶನದಲ್ಲಿ ೧೧೬ ಸಂಶೋಧನಾ ವಿದ್ಯಾರ್ಥಿಗಳು ಎಂ.ಫಿಲ್. ಪದವಿಯನ್ನು ೧೯ ಜನ ಪಿಎಚ್.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ. ಪ್ರಸ್ತುತ ೯ ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನಾ ಕಾರ್ಯವನ್ನು ನಡೆಸುತ್ತಿದ್ದು ಈ ವರ್ಷ(೨೦೨೨) ೫ ಮಂದಿ ಪ್ರಬಂಧ ಸಲ್ಲಿಸುತ್ತಿದ್ದಾರೆ. ಈ ಮಾನ್ಯತಾ ಸಂಸ್ಥೆಯ ಕಾರ್ಯ ವೈಖರಿಯನ್ನು ಮನಗಂಡು ೨೦೨೨ ಶೈಕ್ಷಣಿಕ ವರ್ಷದಿಂದ ೧೫ ವಿದ್ಯಾರ್ಥಿಗಳು ಸಂಶೋಧನೆ ನಡೆಸಲು ವಿಶ್ವವಿದ್ಯಾಲಯ ಅವಕಾಶ ಕಲ್ಪಿಸಿದ್ದು ೮ ಜನ ಹಿರಿಯ ವಿದ್ಯಾಂಸರು ಮಾರ್ಗದರ್ಶನ ಮಾಡುತ್ತಿದ್ದಾರೆ. ಡಾ. ವಿಜಯಾ ಸುಬ್ಬರಾಜ್ ಅವರು ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದ ಸ್ಥಾನದಲ್ಲಿ ಡಾ. ಚಿತ್ತಯ್ಯ ಪೂಜಾರ್ ಸಂಯೋಜಕರಾಗಿ ಈಗ ಕಾರ್ಯ ನಿರ್ವಹಿಸುತ್ತಿದ್ದಾರೆ.

೧. ಶ್ರೀ ಎಚ್.ವಿ. ರವೀಶ್–ಆಧುನಿಕ ಕನ್ನಡ ಮಹಾಕಾವ್ಯಗಳಲ್ಲಿ ರಾಮಾಯಣದ ಆಧಾರಿತಗಳು– ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರೀ
೨. ಶ್ರೀ ಮಂಜುನಾಥ್ ಎನ್.– ಬೆಂಗಳೂರು ನಗರ ಜಿಲ್ಲೆಯ ಸ್ಥಳನಾಮಗಳು ಒಂದು ಸಾಮಾಜಿಕ ಭಾಷಿಕ ಅಧ್ಯಯನ–ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರೀ
೩. ಶ್ರೀ ರಮಾನಂದ ಕೆ.ವಿ.– ಹರಿದಾಸ ಸಾಹಿತ್ಯಕ್ಕೆ ಮಾಧ್ವಯತಿಗಳ ಕೊಡುಗೆ– ಡಾ. ಅನಂತಪದ್ಮನಾಭರಾವ್
೪. ಶ್ರೀಮತಿ ಹೇಮಾವತಿ ಹೆಚ್. ಚಂದ್ರಶೇಖರ ಕಂಬಾರರ ಸೃಜನಶೀಲ ಕೃತಿಗಳು ಒಂದು ಅಧ್ಯಯನ– ಶ್ರೀ ಎನ್. ಬಸವಾರಾಧ್ಯ
೫. ಶ್ರೀಮತಿ ಸಿ.ಎಂ. ಶಾಂತಕುಮಾರಿ–ಟಿ. ಎನ್. ಮಹಾದೇವಯ್ಯನವರ ಬದುಕು–ಬರಹ ಒಂದು ಅಧ್ಯಯನ–ಶ್ರೀ ಎನ್. ಬಸವಾರಾಧ್ಯ
೬ ಶ್ರೀಮತಿ ಶಾಂತಕುಮಾರಿ– ಕಂಪ್ಯೂಟರ್ ನೆಲೆಯಲ್ಲಿ ಬದಲಾದ ಕರ್ನಾಟಕ–ಡಾ. ಎಂ.ಎಲ್. ಲಲಿತಮ್ಮ
೭ ಶ್ರೀ ಎಂ. ಹಾಲಪ್ಪ–ಚಿತ್ರದುರ್ಗದ ಜಿಲ್ಲೆಯ ಜಾನಪದ ವೈದ್ಯ– ಡಾ. ಎಂ. ಎಲ್. ಲಲಿತಮ್ಮ
೮. ಶ್ರೀ ಎನ್. ಸುರೇಶ್ ನಾಗಲಮಡಿಕೆ–ಕನಕದಾಸ–ಒಂದು ಸಂಸ್ಕೃತಿ ಅಧ್ಯಯನ–ಡಾ. ಅನಂತ ಪದ್ಮನಾಭರಾವ್
೯. ಶ್ರೀಮತಿ ರೇಣುಕ ಪ್ರಸಾದ್. ಪಿ.ಆರ್– ೨೦ನೇ ಶತಮಾನದ ಕನ್ನಡ ಚಿಂತನೆಯಲ್ಲಿ ಸಂತಸಂಸ್ಕೃತಿಯ ವ್ಯಾಖ್ಯಾನಗಳು ತುಲನಾತ್ಮಕ ಅಧ್ಯಯನ – ಡಾ. ಕೆ.ವಿ. ರಮೇಶ್
೧೦. ಶ್ರೀ ಎಲ್.ಎಂ. ವೆಂಕಟೇಶ್–ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಅಧ್ಯಯನ– ಡಾ.ಪಿ.ವಿ.ನಾರಾಯಣ
೧೧. ಶ್ರೀ ಮುತ್ತುರಾಜು. ಕೆ. ಮುತ್ತತ್ತಿ ಒಂದು ಸಾಂಸ್ಕೃತಿಕ ಅಧ್ಯಯನ– ಪ್ರೊ. ಡಿ. ಲಿಂಗಯ್ಯ
೧೨. ಶ್ರೀ ಮಂಜುನಾಥಸ್ವಾಮಿ ಬಿ.ಎಸ್. ವಚನ ಚಳುವಳಿ ಆಂತರಿಕ ವೈರುಧ್ಯಗಳು– ಡಾ. ಪಿ. ವಿ.ನಾರಾಯಣ
೧೩. ಶ್ರೀ ನಾಗರಾಜ ಹೊಸರಕರ್–ಮೈಲಾರ ಲಿಂಗ ಆಚರಣೆ–ಒಂದು ವಿಶ್ಲೇಷಣಾತ್ಮಕ ಅಧ್ಯಯನ – ಡಾ.ಎಸ್. ನಾಗರಾಜ
೧೪. ಶ್ರೀಮತಿ ಲಕ್ಷ್ಮೀ ವಿ.–ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳ–ಒಂದು ವಿಶ್ಲೇಷಣಾತ್ಮಕ ಅಧ್ಯಯನ– ಡಾ. ಎಸ್. ನಾಗರಾಜ

೧೫. ಶ್ರೀ ಕೆ.ವಿ. ಅನಂತಪದ್ಮನಾಭ–ದಕ್ಷಿಣ ಕರ್ನಾಟಕದ ಕನ್ನಡ ಶಾಸನಗಳಲ್ಲಿ ಸಾಹಿತ್ಯಿಕ ಮೌಲ್ಯ–ಡಾ. ಕೆ.ವಿ. ರಮೇಶ್

೧೬. ಶ್ರೀ ಸುರೇಶ ಕಾಂತರಾಜಪುರ–ಐಕನಹಳ್ಳಿ ಒಂದು ಸಾಂಸ್ಕೃತಿಕ ಅಧ್ಯಯನ – ಡಾ. ಪ್ರಸಾದ್‌ಸ್ವಾಮಿ

೧೭. ಶ್ರೀಮತಿ ಶೈಲಜ ಎ.ಬಿ.–ಸಾದರು–ಒಂದು ಸಾಂಸ್ಕೃತಿಕ ಅಧ್ಯಯನ– ಡಾ.ಆರ್. ಲಕ್ಷ್ಮೀನಾರಾಯಣ

೧೮. ಶ್ರೀಮತಿ ವಾಣಿಶ್ರೀ ಬಿ. ಎಂ.–ಕನ್ನಡ ಮಹಿಳಾ ಹರಿದಾಸರು ಒಂದು ಅಧ್ಯಯನ– ಡಾ. ಅನಂತಪದ್ಮನಾಭರಾವ್

೧೯. ಶ್ರೀಮತಿ ಬಿ. ಎಸ್. ವಾಣಿ–ಕನ್ನಡದಲ್ಲಿ ಮಹಾಭಾರತ ಕುರಿತಾದ ಆಧುನಿಕ ಚಿಂತನೆಗಳು (ಕನ್ನಡ ಪರಿಕಲ್ಪನೆಯನ್ನು ಅನುಲಕ್ಷಿಸಿ)– ಡಾ.ಕೆ. ರಮಾನಂದ ಈ ಸಾಲಿನಲ್ಲಿ ಸಲ್ಲಿಸಿರುವವರು

೨೦. ಶ್ರೀ ಎಂ. ರಮೇಶ– ಕನ್ನಡ ಕಾದಂಬರಿಗಳಲ್ಲಿ ಯುವ ಪ್ರಜ್ಞೆಯ ಸ್ವರೂಪ– ಪ್ರಾತಿನಿಧಿಕ ಕಾದಂಬರಿಗಳನ್ನು ಅನುಲಕ್ಷಿಸಿ–ಡಾ. ಪುಟ್ಟಸ್ವಾಮಿ ಕಲ್ಲುದೇವರಹಳ್ಳಿ

೨೧. ಶ್ರೀ ರಮೇಶ ಕೆ.ವಿ.–ಸಾಮಾಜಿಕ ಜಾಲತಾಣಗಳು : ಕನ್ನಡ ಭಾಷಾ ಬಳಕೆ–ಡಾ. ಶಾಂಭವಿ

೨೨. ಶ್ರೀಮತಿ ಸುಧಾ ಬಿ.ಆರ್. –ನವ್ಯೋತ್ತರ ಕನ್ನಡ ಸಣ್ಣಕಥೆಗಳ ಭಾಷಿಕ ವಿನ್ಯಾಸಗಳು– ಡಾ. ಪುಟ್ಟಸ್ವಾಮಿ ಕಲ್ಲು ದೇವರಹಳ್ಳಿ

೨೩. ಶ್ರೀ ಎ.ಎನ್. ವಿಜಯಕುಮಾರ್–ನವ್ಯೋತ್ತರ ಕಾದಂಬರಿಗಳಲ್ಲಿ ದೇಸೀಯತೆಯ ಪರಿಕಲ್ಪನೆ– ಡಾ. ಮುತ್ತೇಗೌಡ ಟಿ.ಎನ್.

೨೪. ಶ್ರೀಮತಿ ಕೆ. ನಳಿನ–ಆಧುನಿಕ ಕನ್ನಡ ಮಹಾಕಾವ್ಯಗಳಲ್ಲಿ ಪುರಾಣ ಮತ್ತು ಇತಿಹಾಸಗಳ ಅಂತರ್ ಸಂಬಂಧ– ಡಾ. ಬಿ. ಸಿ. ರಾಜಕುಮಾರ್.

ಈ ಕೆಳಕಂಡ ಮೂವರು ಸಂಶೋಧಕರ ಜೊತೆಗೆ ಈ ಸಾಲಿನ ಆಯ್ಕೆಯಲ್ಲಿ ೧೨ ಮಂದಿ ಸಂಶೋಧಕರು ಸೇರ್ಪಡೆಯಾಗಲಿದ್ದಾರೆ.

೧. ಶ್ರೀ ಜಯಚಂದ್ರಶೇಖರ ವೈ.– ಆಧುನಿಕ ಕನ್ನಡ ಸಾಹಿತ್ಯದಲ್ಲಿ ದುರಂತ ನಾಟಕಗಳ ಅಧ್ಯಯನ– ಡಾ. ಬಿ. ಸಿ. ರಾಜಕುಮಾರ್.

೨. ಶ್ರೀ ಸಿದ್ಧಪ್ಪ ಜಿ.ಪಿ– ಗ್ರಾಮದೇವತೆಗಳ ಅಧ್ಯಯನದ ತಾತ್ವಿಕ ನೆಲೆಗಳು –ಡಾ. ಶಾಂಭವಿ

೩. ರಾಘವೇಂದ್ರ ಜಿ. ಕನ್ನಡ ನವೋದಯ ಕಾದಂಬರಿಗಳ ಭಾಷಾ ಅಧ್ಯಯನ–ಡಾ. ಟಿ. ಎನ್. ಮುತ್ತೇಗೌಡ

ಸಂಸ್ಥೆಯ ಮೂಲ ಆಶಯದಂತೆ ನಶಿಸುತ್ತಿರುವ ಪ್ರಾಚೀನ ಹಸ್ತಪ್ರತಿಗಳನ್ನು ಓದುವ, ಪ್ರತಿಮಾಡುವ ಕಲೆಯನ್ನು ತರಗತಿ ನಡೆಸುವುದರ ಮೂಲಕ ಕಲಿಸಿಕೊಡುವುದಷ್ಟೇ ಅಲ್ಲದೆ ಓಲೆಗರಿಗ್ರಂಥಗಳನ್ನು ಶಾಸ್ತ್ರೀಯವಾಗಿ ಸಂಪಾದಿಸುವುದು, ಅವುಗಳನ್ನು ಸಂರಕ್ಷಿಸುವುದು, ಮೋಡಿಲಿಪಿಯನ್ನು ಅಧ್ಯಯನಮಾಡಿ ಅರ್ಥೈಸುವುದನ್ನು ಆಸಕ್ತರಿಗೆ ವೈಜ್ಞಾನಿಕವಾಗಿ ಕಲಿಸಿಕೊಡುವ ಕೆಲಸವನ್ನು ೧೯೯೦ರಿಂದ ಪ್ರತಿಷ್ಠಾನ ನಡೆಸಿಕೊಂಡು ಬರುತ್ತಿದೆ. ವಿವಿಧ ಲಿಪಿಗಳ ಸಾವಿರಾರು ಹಸ್ತಪ್ರತಿಗಳನ್ನು ಭಂಡಾರದಲ್ಲಿ ಸುರಕ್ಷಿತವಾಗಿ ಕಾಪಾಡಿಕೊಂಡು ಬರುತ್ತಿರುವ ನಮ್ಮ ಸಂಸ್ಥೆ ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನಿಂದ ಮಾನ್ಯತೆ ಪಡೆದು ಸೂಚಿ, ಸಂಪ್ರತಿ, ಸಂಪಾದನೆ ಮುಂತಾದ ಸಾಹಿತ್ಯ ಸೇವೆ ಮಾಡುತ್ತಿರುವ ಭಾರತದಲ್ಲಿಯೇ ಏಕೈಕ ಸಂಸ್ಥೆಯಾಗಿದೆ. ಇದರ ಜವಾಬ್ದಾರಿಯನ್ನು ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ಪ್ರಾಮಾಣಿಕವಾಗಿ, ನಿಷ್ಠೆಯಿಂದ, ಸ್ವಯಂ ಪ್ರೇರಿತರಾಗಿ ಮಾಡುತ್ತಿದ್ದಾರೆ. ಈ ವರ್ಷದಿಂದ ಶ್ರೀಉಮೇಶ್ ಶಿರೂರು ಅವರು

ತಮ್ಮ ನಿವೃತ್ತಿಯ ನಂತರ ಸ್ವಯಂ ಆಸಕ್ತಿಯಿಂದ ತಾವೂ ಕೈ ಜೋಡಿಸಲು ಮುಂದಾಗಿರುವುದು ಈ ವಿಭಾಗದ ಕಾರ್ಯವು ವಿಸ್ತರಣೆಯಾಗಲು ಸಹಕಾರಿಯಾಗಿದೆ. ಮುಂದುವರಿದು ಎಂ.ವಿ.ಸೀ. ಶತಮಾನ ವರ್ಷವಾದ ೨೦೧೦ರಿಂದ ಬೇರೆ ಬೇರೆ ಜಿಲ್ಲೆ, ಸಂಘ ಸಂಸ್ಥೆ, ಮಠ ಮತ್ತು ಶಾಲಾ ಕಾಲೇಜುಗಳಲ್ಲಿ ಶ್ರೀ ಬಿ. ಎಸ್. ಗುರುಪ್ರಸಾದ್ ಅವರು ಆಹ್ವಾನಿತರಾಗಿ ಪ್ರದರ್ಶನ, ಸಾಹಿತ್ಯ ಕೃತಿಗಳ ಅಧ್ಯಯನ ಮತ್ತು ಉಪನ್ಯಾಸ ನೀಡಿ ಅರಿವು ಮೂಡಿಸುತ್ತಿದ್ದಾರೆ. ಪ್ರಾಚೀನ ಕಾವ್ಯಗಳನ್ನು ಅಭ್ಯಾಸ ಮಾಡುವ ಆಸಕ್ತರನ್ನು ಗಮನದಲ್ಲಿರಿಸಿಕೊಂಡು ಕಳೆದ ೨೦ ವರ್ಷಗಳಿಂದ ಹಳಗನ್ನಡ ಮತ್ತು ಶಾಸನ ಅಧ್ಯಯನ ತರಗತಿಗಳನ್ನು ಹಿರಿಯ ವಿದ್ವಾಂಸರ ಮೂಲಕ ನಡೆಸಲಾಗುತ್ತಿದೆ. ಪ್ರತಿ ವರ್ಷವೂ ಒಂದು ಪಠ್ಯವನ್ನು ಸಂಗ್ರಹಿಸಿ ಬೋಧಿಸುವುದರ ಮೂಲಕ ಪ್ರಾಚೀನ ಕಾವ್ಯ ಮತ್ತು ಶಾಸನಗಳ ಓದು, ಪದ ವಿಭಾಗಕ್ರಮ, ಅನ್ವಯಕ್ರಮ ಮತ್ತು ಅರ್ಥಗ್ರಹಿಕೆಯನ್ನು ತಿಳಿಸಿಕೊಡಲಾಗುತ್ತದೆ. ಡಾ. ಪಿ. ವಿ. ನಾರಾಯಣ, ಡಾ.ಕೆ. ಆರ್. ಗಣೇಶ್, ಪ್ರೊ. ಮಧುಸೂಧನ, ಡಾ. ವಿಜಯಾಸುಬ್ಬರಾಜ್, ಡಾ. ಆರ್. ಲಕ್ಷ್ಮೀನಾರಾಯಣ, ಡಾ. ಬಿ.ಪಿ.ವೀರೇಂದ್ರ ಕುಮಾರ್ ಡಾ. ಬೈರಮಂಗಲರಾಮೇಗೌಡ, ಡಾ. ಬಿ.ಸಿ. ರಾಜಕುಮಾರ್, ಡಾ. ಎನ್.ಆರ್. ಲಲಿತಾಂಬ, ಡಾ. ಶಾಂತರಾಜು, ಪ್ರೊ. ಚಂದ್ರಶೇಖರ್ ನಾದೂರ್ ಇನ್ನೂ ಅನೇಕರ ಸೇವೆಯನ್ನು ನಿರಂತರವಾಗಿ ಪಡೆಯಲಾಗುತ್ತಿದೆ. ಪದವಿ ವಿದ್ಯಾರ್ಥಿಗಳಿಂದ ಮೊದಲ್ಗೊಂಡು ಹಿರಿಯ ನಾಗರಿಕರವರೆಗೆ ಎಲ್ಲಾ ವಯೋಮಾನದವರೂ ಕಲಿಕೆಯಲ್ಲಿ ಪಾಲ್ಗೊಂಡು ಅಭ್ಯಾಸ ಮಾಡುತ್ತಿರುವುದು ಪ್ರಾಚೀನ ಕಾವ್ಯಗಳ ಪ್ರಸ್ತುತತೆಯನ್ನು ತೋರಿಸುತ್ತದೆ.

ನಾಡಿನ ಗಣ್ಯಾತಿಗಣ್ಯರ ಹೆಸರಿನಲ್ಲಿ ಸ್ಥಾಪನೆಯಾಗಿರುವ ದತ್ತಿಗಳ ಮೂಲಕ ಗಮಕ, ಸಂಗೀತ, ಉಪನ್ಯಾಸ, ಸಂವಾದ, ಸಂಸ್ಮರಣೆ ಕಾರ್ಯಕ್ರಮಗಳನ್ನು ನಿಯತಕಾಲದಲ್ಲಿ ನಡೆಸಿಕೊಂಡು ಬರುವುದರ ಮೂಲಕ ಮರೆಯಬಾರದ ಮಹಾನುಭಾವರು ಮತ್ತು ಸಾಹಿತ್ಯವನ್ನು ಅರಿತುಕೊಳ್ಳುವ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ರಂಗನಾಯಕಮ್ಮ–ಜಿ ಸುಬ್ಬರಾವ್ ದತ್ತಿ (ಸಂಗೀತ), ದಿ.ಬಿ.ಎಸ್. ಗೋಪಾಲರಾವ್ ಮತ್ತು ಶ್ರೀಮತಿ ವೇದವತಿ ಬಾಯಿ ದತ್ತಿ(ಗಮಕ), ಮೋಹನ್ ದೇವ್ ಆಳ್ವ–ಎಂ. ಕೆ. ಶೈಲಜಾ ದತ್ತಿ (ಸಂಗೀತ ಸ್ಪರ್ಧೆ), ಹಾಸ್ಯಬ್ರಹ್ಮ ಟ್ರಸ್ಟ್ ದತ್ತಿ (ಹಾಸ್ಯ) ಎಂ. ಎ. ಜಯಚಂದ್ರ ದತ್ತಿ, ಆ.ನೇ. ಉಪಾಧ್ಯ ದತ್ತಿ, ಡಿ.ಎಲ್. ನರಸಿಂಹಾಚಾರ್ ದತ್ತಿ, ಎಂ.ಜಿ. ನಂಜುಂಡಾರಾಧ್ಯ ದತ್ತಿ, ಸೋಸಲೆ ಅಯ್ಯಾಶಾಸ್ತ್ರಿದತ್ತಿ, ಪಂಡಿತ ಓ.ಆರ್. ರಾಮಣ್ಣ ಶ್ರೀಮತಿ ಪುಟ್ಟಚ್ಚಮ್ಮ ದತ್ತಿ, ಡಾ. ಉಪ್ಪಂಗಳ ರಾಮಭಟ್ಟ ದತ್ತಿ, ಕಣಕಟ್ಟೆ ಕೃಷ್ಣಮೂರ್ತಿರಾವ್ ದತ್ತಿ (ಸಂಗೀತ), ಸಿ.ಕೆ. ನಾಗರಾಜರಾವ್ ದತ್ತಿ, ಕೆ.ಪಿ.ರಾವ್ ದತ್ತಿ, ಕೊರಟಿ ಶ್ರೀನಿವಾಸರಾವ್ ದತ್ತಿ, ಕ. ವೆಂ. ರಾಘವಾಚಾರ್ ದತ್ತಿ, ಡಿ.ವಿ.ಗುಂಡಪ್ಪ ದತ್ತಿ, ಬಿ. ಎಸ್. ಸಣ್ಣಯ್ಯ ದತ್ತಿ, ಡಾ.ಎಂ.ಎಲ್. ಲಲಿತಮ್ಮ ದತ್ತಿ, ವೈಯಾಕರಣಿ ಗರಣಿ ಕೃಷ್ಣಾಚಾರ್ಯ ದತ್ತಿ, ಗೋವಿಂದ ಜಾಲಿಹಾಳ ದತ್ತಿ (ಸಂಗೀತ ಸ್ಪರ್ಧೆ), ಜಯಲಕ್ಷ್ಮಮ್ಮ ಬಾಪು ರಾಮಣ್ಣ ದತ್ತಿ, ಶ್ರೀಮತಿ ಎಸ್. ಕೆ. ಪ್ರೇಮ, ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ ದತ್ತಿ, ರಾಸ ಸಾಹಿತ್ಯ ಮತ್ತು ಸಮೇತನಹಳ್ಳಿ ರಾಮರಾವ್ ದತ್ತಿ, ಪ್ರೊ. ಡಿ. ಲಿಂಗಯ್ಯ ದತ್ತಿ, ಟಿ. ಎಸ್. ವೆಂಕಣ್ಣಯ್ಯ ದತ್ತಿ, ತೀ.ನಂ.ಶ್ರೀ ದತ್ತಿ, ಶಾರದಮ್ಮ ಹನುಮಯ್ಯ ದತ್ತಿ, ಎ. ಸುಬ್ಬಯ್ಯ ಹೆಗಡೆ ಶಾಸ್ತ್ರಿ ದತ್ತಿ, ಯಂ. ಕೆ. ವಿಜಯಲಕ್ಷ್ಮಿ ದತ್ತಿ, ಎನ್. ಅನಂತರಂಗಾಚಾರ್ ದತ್ತಿ, ಅನಂತರಂಗ ಪ್ರತಿಷ್ಠಾನ ದತ್ತಿ, ರುಕ್ಮಿಣಮ್ಮ ಸೀತಾರಾಮರಾವ್ ದತ್ತಿ, ಶಂ.ಬಾ. ಜೋಶಿ ದತ್ತಿ, ಡಾ. ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸಂಸ್ಮರಣ ದತ್ತಿ, ಬೇಟೆರಾಯ ದೀಕ್ಷಿತ್, ಬಿ. ರಾಮಸ್ವಾಮಿ ದತ್ತಿ, ಎಸ್. ಶ್ರೀಕಂಠಯ್ಯ ದತ್ತಿ, ಎಚ್. ವಿ. ಸಾವಿತ್ರಮ್ಮ ರಾಮಸ್ವಾಮಿ ದತ್ತಿ, ಎಂ.ಎ. ರಾಮಾನುಜಯ್ಯಂಗಾರ್ ದತ್ತಿ, ತೀ.ನಂ.ಶ್ರೀ ದತ್ತಿ, ಸರ್. ಸಿ.ವಿ.ರಾಮನ್ ದತ್ತಿ, ವಿ. ಸೀ. ದತ್ತಿ, ಶಾಂತಾ ಪ್ರಭುಶಂಕರ ದತ್ತಿ, ವೆಂಕಟರಂಗಪ್ಪ ದತ್ತಿ, ಚಂದ್ರಶೇಖರಶರ್ಮ ದತ್ತಿ, ಟಿ.ಎನ್. ಮಹದೇವಯ್ಯ ದತ್ತಿ, ಜಿ.ಪಿ.ರಾಜರತ್ನಂ ದತ್ತಿ, ರಾಮಚಂದ್ರ ಪಟವಾರಿ ದತ್ತಿ, ಬಿ.ಎಂ.ಶ್ರೀ ದತ್ತಿಗಳನ್ನು

ಸ್ಥಾಪಿಸಿದ್ದು ಸ್ಥಾಪಕರ ಆಶಯದಂತೆ ಉಪನ್ಯಾಸ, ಗಮಕ, ಸಂಗೀತ, ಹಾಸ್ಯ ಸ್ಪರ್ಧೆಗಳನ್ನು ನಡೆಸುವುದರ ಮೂಲಕ ಕನ್ನಡ ನಾಡಿನ ಶ್ರೇಷ್ಠ ವಿದ್ವಾಂಸರನ್ನು ಆಹ್ವಾನಿಸಿ ಅವರಿಂದ ವಿದ್ವತ್‌ಪೂರ್ಣವಾದ ಉಪನ್ಯಾಸಗಳನ್ನು ನೀಡಿಸುವುದರ ಮೂಲಕ ಕನ್ನಡ ಸಾಹಿತ್ಯದ ಹಿರಿಮೆ ಗರಿಮೆಯನ್ನು ತಿಳಿಸಲು ಅನುಕೂಲ ಮಾಡಿಕೊಡುವ ವೇದಿಕೆಯನ್ನು ನಿರ್ಮಿಸಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಬರಲಾಗುತ್ತಿದೆ.

ಬಿ.ಎಂ.ಶ್ರೀ ಪ್ರತಿಷ್ಠಾನವು ದತ್ತಿದಾನಿಗಳು ಸ್ಥಾಪಿಸಿರುವ ನಿಧಿಯಿಂದ ಅನೇಕ ಪ್ರಶಸ್ತಿಗಳನ್ನು ಪ್ರತಿವರ್ಷವೂ ನೀಡುತ್ತಾ ಬರುತ್ತಿದೆ ೨೦೧೩ರಲ್ಲಿ ಶ್ರೀಯವರ ಶ್ರೀ ಸಾಹಿತ್ಯಪ್ರಶಸ್ತಿ ಶಾ. ಬಾಲುರಾವ್ ಅವರ ಧರ್ಮಪತ್ನಿ ಶ್ರೀಮತಿ ಕಮಲಿನಿ ಶಾ.ಬಾಲುರಾವ್ ಅವರು ೧೫,೦೦,೦೦೦/– (ಹದಿನೈದು ಲಕ್ಷ) ರೂಪಾಯಿಗಳ ನಿಧಿ ಸ್ಥಾಪಿಸಿ ಪ್ರತಿವರ್ಷವೂ ೧,೦೦,೦೦೦/– (ಒಂದು ಲಕ್ಷ) ರೂಪಾಯಿಗಳ ನಗದು ಪ್ರಶಸ್ತಿ, ಫಲಕವನ್ನು ನೀಡಲು ಸೂಚಿಸಿದ್ದಾರೆ. ಇದರಿಂದ ಬರುವ ಬಡ್ಡಿ ಕಡಿಮೆಯಾದಾಗ ೨೦೧೮ರಲ್ಲಿ ಮತ್ತೆ ೫,೦೦,೦೦೦/–(ಐದು ಲಕ್ಷ ರೂಪಾಯಿಗಳು) ನೀಡಿ ಒಟ್ಟು ೨೦,೦೦,೦೦೦–/ (ಇಪ್ಪತ್ತು ಲಕ್ಷ)ರೂ.ಗಳ ನಿಗದಿತ ಠೇವಣಿ ಇರಿಸಿ ೨೦೧೪ ರಿಂದ ಕ್ರಮವಾಗಿ ಡಾ.ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಶ್ರೀ ಬಿ.ಎಸ್. ಸಣ್ಣಯ್ಯ, ಡಾ. ಸಿದ್ಧಲಿಂಗಯ್ಯ, ಡಾ.ಕಮಲಾಹಂಪನಾ, ಪ್ರೊ. ಎಲ್.ಎಸ್. ಶೇಷಗಿರಿರಾವ್, ಡಾ. ಕೆ. ವಿ. ನಾರಾಯಣ, ಡಾ.ಸಿ.ಎನ್. ರಾಮಚಂದ್ರನ್, ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ಪ್ರೊ. ಗುರುಲಿಂಗ ಕಾಪಸೆಯವರಿಗೆ ಪ್ರಶಸ್ತಿ ನೀಡಿದೆ. ಪ್ರತಿವರ್ಷ ಜನವರಿಯಲ್ಲಿ ಪ್ರಧಾನ ಮಾಡುವ ಈ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆಮಾಡಲು ಕನ್ನಡನಾಡಿನ ಗಣ್ಯವಿದ್ವಾಂಸರ ಸಮಿತಿ ರಚಿಸಿ ಅವರ ಆಯ್ಕೆಯಂತೆ ಪುರಸ್ಕಾರ ನೀಡುವ ಪರಿಪಾಠವನ್ನು ಪಾಲಿಸಿಕೊಂಡು ಬರುತ್ತಿದೆ. ಆದ್ದರಿಂದಲೇ ನಾಡಿನ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ 'ಶ್ರೀ ಪ್ರಶಸ್ತಿ'ಯೂ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಕೊಡುಗೈ ದಾನಿ ಎನಿಸಿರುವ ಶ್ರೀಮತಿ ಕಮಲಿನಿ ಶಾ. ಬಾಲುರಾವ್ ಅವರು ಮತ್ತೆ ೨೦೧೪ರಲ್ಲಿ ತಮ್ಮ ಪತಿ ಶಾ. ಬಾಲುರಾವ್ ಅವರ ಹೆಸರಿನಲ್ಲಿ ಶಾ.ಬಾಲುರಾವ್ ಅನುವಾದ ಪ್ರಶಸ್ತಿ ಮತ್ತು ಶಾ.ಬಾಲುರಾವ್ ಯುವ ಪ್ರಶಸ್ತಿಗಾಗಿ ತಲಾ. ೫,೦೦,೦೦೦/– (ಐದು ಲಕ್ಷ) ರೂಪಾಯಿಗಳ ನಿಧಿಯನ್ನು ಸ್ಥಾಪಿಸಿ ಆ ವರ್ಷದಿಂದಲೇ ತಲಾ ೨೫,೦೦೦/–(ಇಪ್ಪತ್ತೈದು ಸಾವಿರ) ರೂಪಾಯಿಗಳ ನಗದು ಬಹುಮಾನ, ಪ್ರಶಸ್ತಿ ಪತ್ರ, ಫಲಕವನ್ನು ಸಮರ್ಪಿಸುವ ಹಂಬಲ ವ್ಯಕ್ತಪಡಿಸಿದರು. ಇಲ್ಲಿಯವರೆಗೆ ಕ್ರಮವಾಗಿ ಶಾ. ಬಾಲುರಾವ್ ಅನುವಾದ ಪ್ರಶಸ್ತಿಯನ್ನು ಡಾ. ತಿಪ್ಪೇಸ್ವಾಮಿ, ಡಾ.ಎಚ್.ಎಸ್. ರಾಘವೇಂದ್ರರಾವ್, ಶ್ರೀ ವಸುಧೇಂದ್ರ, ಶ್ರೀ ಜಯಪ್ರಕಾಶ್ ನಾರಾಯಣ, ಪ್ರೊ. ಎನ್.ಎಸ್. ಅಶ್ವತ್ಥನಾರಾಯಣ ಶಾಸ್ತ್ರಿ (ನೈಷಧಂ ಎಸ್ಸೆ), ಶ್ರೀ ಸಂತ ನಾರಾಯಣಸ್ವಾಮಿ, ಪ್ರೊ.ಎಂ. ಅಬುಲ್ ರೆಹಮಾನ್‌ಪಾಷ, ಡಾ. ಪದ್ಮರಾಜ ದಂಡಾವತಿ, ಶ್ರೀಮತಿ ಶೈಲಜ ಜಿ.ಪಿ. ಅವರು ಪಡೆದುಕೊಂಡರೆ, ಶಾ. ಬಾಲುರಾವ್ ಯುವಪ್ರಶಸ್ತಿಯನ್ನು ಶ್ರೀಮತಿ ಅಲಕಾ ಕಟ್ಟೆಮನೆ, ಶ್ರೀ ಪದ್ಮನಾಭಭಟ್ಟ ಶೇವ್ಕಾರ್, ಡಾ.ಸತ್ಯಮಂಗಲ ಮಹಾದೇವ, ಡಾ. ಬೇಲೂರು ರಘುನಂದನ್, ಶ್ರೀ ಶ್ರೀಧರ ಬನವಾಸಿ, ಶ್ರೀ ಸ್ವಾಮಿ ಪೊನ್ನಾಚಿ, ಶ್ರೀ ಶಶಿ ತರೀಕೆರೆ, ಶ್ರೀ ಹರೀಶ್ ಹಾಗಲವಾಡಿ, ಶ್ರೀ ಇಸ್ಮಾಯಿಲ್ ತಳಕಲ್ ಇವರು ಪಡೆದುಕೊಂಡಿದ್ದಾರೆ. ಪ್ರತಿವರ್ಷ ಅಕ್ಟೋಬರ್ ತಿಂಗಳಿನಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ನಡೆಸುಕೊಂಡು ಬರಲಾಗುತ್ತಿದೆ. ಈ ಎರಡೂ ಪ್ರಶಸ್ತಿಗಳೂ ಅತಿ ಜನಪ್ರಿಯವಾಗಿದ್ದು ಈ ಪ್ರಶಸ್ತಿಗಾಗಿ ಸೆಪ್ಟಂಬರ್ ತಿಂಗಳಿನಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ಕೃತಿಗಳನ್ನು ಆಹ್ವಾನಿಸಿ ಆ ಕ್ಷೇತ್ರದಲ್ಲಿ ನುರಿತರಾದ ಇಬ್ಬರು ತೀರ್ಪುಗಾರ ಸಮಿತಿ ರಚಿಸಿ ಅವರ ಆಯ್ಕೆಯಂತೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಶ್ರೀ ರಮೇಶ, ಮತ್ತು ಶ್ರೀಮತಿ ವಿಮಲಾಮೂರ್ತಿ ಇವರು ೨೦೧೨ರಲ್ಲಿ ೧,೦೦,೦೦೦/–೨೦೧೩ ರಲ್ಲಿ ೧,೦೦,೦೦೦/– ೨೦೨೧ರಲ್ಲಿ ೧,೦೦,೦೦,೦೦೦/– ಒಟ್ಟು ೩,೦೦,೦೦೦/–ರೂಪಾಯಿಗಳನ್ನು ನೀಡಿ (ಎ.ಎಸ್. ವೆಂಕಟರಾಮಯ್ಯ) ಸೂ. ವೆಂ. ಆರಗ ಪ್ರಶಸ್ತಿ ನೀಡುವ ಸಲುವಾಗಿ ದತ್ತಿ ನಿಧಿಯನ್ನು

ಸ್ಥಾಪಿಸಿ ವಿಮರ್ಶಾಕೃತಿಗೆ ೧೦,೦೦೦/- (ಹತ್ತು ಸಾವಿರ) ರೂಪಾಯಿಗಳ ನಗದು ಬಹುಮಾನ ಪ್ರಶಸ್ತಿ ಪತ್ರ, ಫಲಕ ನೀಡುವ ಆಶಯದಿಂದ ಸ್ಥಾಪಿಸಿದ್ದಾರೆ. ೨೦೧೪ರಿಂದ ಕ್ರಮವಾಗಿ ಡಾ. ಬಸವರಾಜ ಕಲ್ಗುಡಿ, ಡಾ. ಕೇಶವಶರ್ಮ, ಡಾ. ಕರೀಗೌಡ ಬೀಚನಹಳ್ಳಿ, ಡಾ. ನಟರಾಜ್ ತಲಘಟ್ಟಪುರ, ಡಾ. ಎಚ್. ಶಶಿಕಲಾ, ಡಾ. ಸುರೇಶ ನಾಗಲಮಡಿಕೆ, ಡಾ. ಎಂ. ಉಷಾ, ಡಾ. ಚಿದಾನಂದಸಾಲಿ ಇವರು ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಏಪ್ರಿಲ್ ತಿಂಗಳಿನಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸುತ್ತಾ ಬರಲಾಗುತ್ತಿದೆ.

ಡಾ. ವಿಜಯಾ ಸುಬ್ಬರಾಜ್ ಅವರು ೩,೦೦,೦೦೦/-(ಮೂರು ಲಕ್ಷ) ರೂಪಾಯಿಗಳ ನಿಧಿಯನ್ನು ಸ್ಥಾಪಿಸಿ 'ವಿಜಯಾಸುಬ್ಬರಾಜ್ ಗಣ್ಯಲೇಖಕಿ ಪ್ರಶಸ್ತಿ'ಯನ್ನು ನೀಡುತ್ತಾ ಬಂದಿದ್ದಾರೆ. ಲೇಖಕಿಯರಿಗೆ ಮೀಸಲಾಗಿರುವ ಈ ಪ್ರಶಸ್ತಿಯನ್ನು ಏಪ್ರಿಲ್ ತಿಂಗಳಿನಲ್ಲಿ ಆಯ್ಕೆಯಾದ ಗಣ್ಯರಿಗೆ ೧೦,೦೦೦/-ನಗದು ಪ್ರಶಸ್ತಿ ಪತ್ರ ಮತ್ತು ಫಲಕವನ್ನು ನೀಡುತ್ತಾ ಬರಲಾಗಿ ಈವರಗೆ ೨೦೧೫ರಿಂದ ಕ್ರಮವಾಗಿ ಶ್ರೀಮತಿ ಸುನಂದಾ ಪ್ರಕಾಶಕಡಮೆ, ಶ್ರೀಮತಿ ಆರತಿ ಎಚ್.ಎನ್., ಶ್ರೀಮತಿ ರೇಖಾ ಕಾಖಂಡಕಿ, ಶ್ರೀಮತಿ ಪ್ರೇಮಾಭಟ್ ಅವರು ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಪ್ರೊ. ಎಲ್. ಎಸ್. ಶೇಷಗಿರಿರಾವ್ ಅವರು ವಿಮರ್ಶಾ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗಾಗಿ ನೀಡುವ ಪ್ರಶಸ್ತಿಗಾಗಿ ೩,೦೦,೦೦೦/-(ಮೂರು ಲಕ್ಷ) ರೂಪಾಯಿಗಳ ನಿಧಿ ಸ್ಥಾಪಿಸಿ ಪ್ರತಿವರ್ಷ ಪ್ರೊ. ಎಲ್.ಎಸ್. ಶೇಷಗಿರಿರಾವ್ ವಿಮರ್ಶಕ ಪ್ರಶಸ್ತಿಯನ್ನು ಫೆಬ್ರವರಿ ತಿಂಗಳಿನಲ್ಲಿ ನೀಡುತ್ತಾ ಬಂದಿದ್ದಾರೆ. ಇಲ್ಲಿಯವರೆಗೆ ೨೦೧೭ರಿಂದ ಕ್ರಮವಾಗಿ ಶ್ರೀ ಜಿ.ಆರ್. ತಿಪ್ಪೆಸ್ವಾಮಿ, ಶ್ರೀ ಎಚ್. ಎಸ್. ರಾಘವೇಂದ್ರರಾವ್, ಡಾ. ನರಹಳ್ಳಿ ಬಾಲಸುಬ್ರಮಣ್ಯ, ಡಾ. ಬಿ. ಯು. ಸುಮಾ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿ ಕೊಂಡಿದ್ದಾರೆ. ಇದೇ ತಿಂಗಳು ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ನೀಡಲು ಶ್ರೀಮತಿ ರಾಜೇಶ್ವರಿ ಕೃಷ್ಣ ಅವರು ೩,೦೦,೦೦೦/-(ಮೂರು ಲಕ್ಷ) ರೂಪಾಯಿಗಳ ದತ್ತಿ ನಿಧಿ ಸ್ಥಾಪಿಸಿ ಸಮೂಹ ಮಾಧ್ಯಮದಲ್ಲಿ ಸೇವೆ ಸಲ್ಲಿಸಿರುವ ಗಣ್ಯರನ್ನು ಗುರುತಿಸಿ ನೀಡುತ್ತಾ ಬಂದಿದೆ. ೨೦೧೭ರಿಂದ ಶ್ರೀ ವಸಂತ ನಾಡಿಗೇರ, ಶ್ರೀ ಜಿ.ಎನ್. ರಂಗನಾಥರಾವ್, ಶ್ರೀ ಜಾಣಗೆರೆ ವೆಂಕಟರಾಮಯ್ಯ, ಡಾ. ಆರ್. ಪೂರ್ಣಿಮಾ, ಶ್ರೀ ಡಿ. ವಿ. ರಾಜಶೇಖರ್ ಇವರುಗಳಿಗೆ ನೀಡಿ ಗೌರವಿಸಲಾಗಿದೆ.

ಎಂ. ವಿ. ಸೀತಾರಾಮಯ್ಯ ಅವರ ಮಕ್ಕಳು ತಮ್ಮ ತಂದೆಯ ಹೆಸರಿನಲ್ಲಿ ಪುರಸ್ಕಾರ ನೀಡುವ ಸಲುವಾಗಿ ೨೦೦೨ರಲ್ಲಿ ನಿಧಿಯನ್ನು ಸ್ಥಾಪಿಸಿ ಪ್ರತಿವರ್ಷವೂ ಸೀತಾರಾಮಯ್ಯನವರ ಸಾಹಿತ್ಯ ಕ್ಷೇತ್ರಗಳಾದ ಸೃಜನ ಸಾಹಿತ್ಯ, ಸಂಶೋಧನೆ, ಸಂಘಟನೆ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದವರನ್ನು ಗುರುತಿಸಿ ಪ್ರಶಸ್ತಿ ನೀಡಲು ಆರಂಭಿಸಿದರು. ಆರಂಭದಲ್ಲಿ ೫,೦೦೦/- (ಐದು ಸಾವಿರ) ರೂಪಾಯಿಗಳ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಫಲಕವನ್ನು ನೀಡಲಾಗುತ್ತಿತ್ತು. ೨೦೧೪ರಿಂದ ೩೦,೦೦೦/-ರೂಪಾಯಿಗಳ ನಗದು ಬಹುಮಾನ ನೀಡುವುದನ್ನು ಪ್ರಾರಂಭಿಸಿದರು. ಇಲ್ಲಿಯವರೆಗೆ ಡಾ. ಜಿ. ರಾಮಕೃಷ್ಣ, ಶ್ರೀಮತಿ ಬಾನುಮುಸ್ತಾಕ್, ಶ್ರೀ ವಿ. ಕೃಷ್ಣ, ಪ್ರೊ. ಸಿ. ಮಹಾದೇವಪ್ಪ, ಶ್ರೀ ಸೀತಾರಾಮ ಜಾಗೀರ್‌ದಾರ್, ಶ್ರೀ ನಾ. ಮೊಗಸಾಲೆ, ಡಾ. ಎಂ. ಜಿ. ನಾಗರಾಜ್, ಪ್ರೊ. ಶಿವರಾಮಯ್ಯ, ಪ್ರೊ. ಜಯಪ್ರಕಾಶಗೌಡ ಅವರುಗಳು ಈ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಪ್ರಶಸ್ತಿಯನ್ನು ಪ್ರತಿವರ್ಷ ಸೆಪ್ಟಂಬರ್ ತಿಂಗಳಿನಲ್ಲಿ ಪ್ರದಾನ ಮಾಡಲಾಗುತ್ತದೆ.

ಎಸ್. ವಿ. ಶ್ರೀನಿವಾಸರಾವ್ ಅವರು ಸ್ಥಾಪಿಸಿದ ಸಾರಂಗಿ ವೆಂಕಟರಾಮಯ್ಯ ಪುಟ್ಟಚ್ಚಮ್ಮ ಪುಸ್ತಕ ಬಹುಮಾನ ನೀಡುವ ಸಲುವಾಗಿ ೨೦೦೯ರಲ್ಲಿ ೫೦,೦೦೦/- ರೂಪಾಯಿಗಳ ದತ್ತಿ ನಿಧಿ ಸ್ಥಾಪಿಸಿ ಪ್ರತಿವರ್ಷ ಉತ್ತಮ ನಾಟಕ ಕೃತಿಗೆ ಆರಂಭದಲ್ಲಿ ೨,೦೦೦/-ನಗದು, ಪ್ರಶಸ್ತಿ ಪತ್ರ ಮತ್ತು ಫಲಕ ನೀಡಲಾಗುತ್ತಿತ್ತು. ಈಗ ೩,೦೦೦/-ನಗದು ಬಹುಮಾನ ನೀಡಲಾಗುತ್ತಿದೆ. ಈ ಬಹುಮಾನವನ್ನು ಶ್ರೀಮತಿ

ಸುನಂದಾ ಪ್ರಕಾಶ ಕಡಮೆ, ಶ್ರೀ ಕೆ. ನಾಗರಾಜರಾವ್, ಶ್ರೀಮತಿ ಎಸ್. ಜಿ. ಮಾಲತಿಶೆಟ್ಟಿ, ಶ್ರೀ ರಾ. ಎಲ್ಲಿಂಗಳ, ಶ್ರೀ ಗಣಪತಿ ಹೆಗಡೆ, ಶ್ರೀ ಎಚ್. ನಾಗರಾಜ್, ಶ್ರೀ ಜಿ. ರಘುನಂದನ್, ಶ್ರೀಮತಿ ಸುರೇಖಾ ಕುಲಕರ್ಣಿ, ಶ್ರೀಮತಿ ವಸುಮತಿ ಉಡುಪ, ಶ್ರೀ ಜಯರಾಮ್‌ರಾಯಪುರ ಅವರು ಬಹುಮಾನಗಳನ್ನು ಪಡೆದುಕೊಂಡಿದ್ದಾರೆ. ಎಂ. ವಿ. ಸೀತಾರಾಮಯ್ಯ ಅವರು ೧೯೮೦ರಲ್ಲಿ ಸಾವಿತ್ರಮ್ಮ ದತ್ತಿಯನ್ನು ಸ್ಥಾಪಿಸಿ ಮಹಿಳಾ ಮತ್ತು ಮಕ್ಕಳ ಸಾಹಿತ್ಯ ಪ್ರಶಸ್ತಿಯನ್ನು ಒಂದು ವರ್ಷ ಮಹಿಳಾ ಸೃಜನೇತರ ಸಾಹಿತ್ಯಕ್ಕೆಮತ್ತು ಫಲಕ ನೀಡುವುದನ್ನು ಮತ್ತೊಂದು ವರ್ಷ ಮಕ್ಕಳ ಸಾಹಿತ್ಯಕ್ಕೆ ೧,೦೦೦/–ರೂ.ನಗದು ಬಹುಮಾನ ಪ್ರಶಸ್ತಿಪತ್ರ ನೀಡುವುದನ್ನು ಪಾಲಿಸಿಕೊಂಡು ಬರಲಾಗುತ್ತಿತ್ತು. ಅದು ಈಗ ಎಂ.ವಿ.ಸೀ. ಪುರಸ್ಕಾರದಲ್ಲಿ ಸಂಯೋಜನೆಗೊಂಡು ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ.ಸೀ. ಸಾಹಿತ್ಯ ಪುರಸ್ಕಾರವೆಂಬ ಬದಲಾವಣೆಯೊಡನೆ ಮುಂದುವರಿಯುತ್ತಿದೆ. ಹಾಗೆಯೇ ೧೯೯೫ರಲ್ಲಿ ಸ್ಥಾಪಿಸಿದ ರಾಸಸಾಹಿತ್ಯ ವಿಮರ್ಶಾಲೇಖನ ಬಹುಮಾನ ಸಮೇತನಹಳ್ಳಿ ರಾಮರಾವ್ ಅವರ ಕೃತಿಗಳ ವಿಮರ್ಶೆಯ ಲೇಖನಕ್ಕೆ ೫೦೦/–ರೂ.ಗಳ ನಗದು ಬಹುಮಾನ ನೀಡಲಾಗುತ್ತಿತ್ತು. ಈಗ ಈ ಪ್ರಶಸ್ತಿಯು ಬ್ಯಾಂಕ್ ಬಡ್ಡಿದರ ಕಡಿಮೆಯಾದ ಹಿನ್ನೆಲೆಯಲ್ಲಿ ಉಪನ್ಯಾಸ ಕಾರ್ಯಕ್ರಮವಾಗಿ ರೂಪುಗೊಂಡು ಮುಂದುವರಿಯುತ್ತಿದೆ. ೧೯೮೮ರಲ್ಲಿ ಕಟ್ಟೆ ನಾಗರಾಜ್ ಅವರು ತಮ್ಮ ಅನಂತರಂಗ ಪ್ರತಿಷ್ಠಾನದ ಹೆಸರಿನಲ್ಲಿ ಸ್ಥಾಪಿಸಿದ ಅನಂತರಂಗ ಸಂಶೋಧನಾ ಸಾಹಿತ್ಯ ಪ್ರಶಸ್ತಿಯು ಉತ್ತಮ ಸಂಶೋಧನಾ ಸಾಹಿತ್ಯಕ್ಕೆ ೧,೦೦೦/–ರೂ.ಗಳ ನಗದು ಬಹುಮಾನ, ಪ್ರಶಸ್ತಿ ಪತ್ರ, ಫಲಕ ನೀಡುವುದನ್ನು ನಡಸಿಕೊಂಡು ಬರುತ್ತಿತ್ತು. ಇದೂ ಸಹ ನಿಗದಿತ ಠೇವಣಿಯ ಮೇಲಿನ ಬಡ್ಡಿದರ ಕಡಿಮೆಯಾದ ಕಾರಣದಿಂದ ದತ್ತಿ ಉಪನ್ಯಾಸ ಕಾರ್ಯಕ್ರಮವಾಗಿ ಮುಂದುವರಿಸಿಕೊಂಡು ಬರಲಾಗುತ್ತಿದೆ. ಅಂದರೆ ಬಿ. ಎಂ. ಶ್ರೀ ಪ್ರತಿಷ್ಠಾನವು ತನ್ನಲ್ಲಿ ಸ್ಥಾಪನೆಯಾಗಿರುವ ಯಾವುದೇ ದತ್ತಿನಿಧಿಯಿಂದ ಎಷ್ಟೇ ಬಡ್ಡಿ ಬರುತ್ತಿದ್ದರೂ ಅದನ್ನು ಪರಿಗಣಿಸದೆ, ಅವರು ಸ್ಥಾಪಿಸಿದ ಕಾಲಕ್ಕೆ ಅದು ದೊಡ್ಡ ಮೊತ್ತವೇ ಎಂದು ಪರಿಗಣಿಸಿ ಬದಲಾದ ಸಂದರ್ಭದಲ್ಲಿಯೂ ಅವುಗಳನ್ನು ಸ್ಮರಿಸಿ ದಾನಿಗಳ ಸಹಕಾರದಿಂದ ಕಾರ್ಯಕ್ರಮಗಳನ್ನು ರೂಪಿಸಿ ಸಂಬಂಧಪಟ್ಟವರನ್ನು ಗೌರವಯುತವಾಗಿ ಆಹ್ವಾನಿಸಿ ಕಾರ್ಯಕ್ರಮ ನಡೆಸುತ್ತಿರುವುದು ಸಂಸ್ಥೆಯ ಬದ್ಧತೆಯನ್ನು ಎತ್ತಿ ತೋರಿಸುತ್ತದೆ.

ಸಂಸ್ಥೆ ಆರಂಭವಾದ ದಿನದಿಂದಲೂ ಕನ್ನಡ ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಗಾಗಿ ಅಕ್ಕರಗೊಟ್ಟಿ, ದತ್ತಿ ಉಪನ್ಯಾಸ, ಸಂವಾದ, ಹಸ್ತಪ್ರತಿ ಅಧ್ಯಯನ, ಹಳಗನ್ನಡ ಕಾವ್ಯಾಭ್ಯಾಸ ಡಿಪ್ಲೊಮೊ, ಸಂಶೋಧನೆ, ಸಾಕ್ಷ್ಯಚಿತ್ರ ಪ್ರದರ್ಶನ, ನುಡಿಯಾರಾಧಕರ ಸ್ಮರಣೆ, ಮರೆಯಲಾಗದ ಮಹಾನುಭಾವರು ಎಂಬ ವಿಭಿನ್ನ ಶೀರ್ಷಿಕೆಗಳಲ್ಲಿ ತಿಂಗಳಿಗೆ ಕನಿಷ್ಠ ೪ ಕಾರ್ಯಕ್ರಮಗಳನ್ನು ನಡೆಸುತ್ತಿರುವುದರ ಜೊತೆಗೆ ಪ್ರಕಟಣೆಯಲ್ಲಿಯೂ ಸಹ ಮಾಸಿಕ ಪತ್ರಿಕೆ 'ಹೊಂಗನಸು' ಮತ್ತು ಷಾಣ್ಮಾಸಿಕ 'ಕರ್ನಾಟಕ ಲೋಚನ'ದ ಜೊತೆಗೆ ಸಾಹಿತ್ಯಾತ್ಮಕ ಮೌಲ್ಯದ ಗ್ರಂಥಗಳ ಪ್ರಕಟಣೆಯನ್ನು ಅನೂಚಾನವಾಗಿ ಮಾಡಿಕೊಂಡು ಬರುತ್ತಿರುವುದು ಪ್ರಶಂಸನಾರ್ಹವಾಗಿದೆ. ೧೬ ಪ್ರಾಚೀನ ಗ್ರಂಥಗಳ ಸಂಪಾದನೆ, ೨೩ ದತ್ತಿ ಉಪನ್ಯಾಸ ಮಾಲೆಯ ಕೃತಿಗಳು, ೫ ತಿಮ್ಮಪ್ಪದಾಸ ಪ್ರಕಾಶನ ಮಾಲೆಯ ಕೃತಿಗಳು, ೨೧ ಜನ್ಮಶತಾಬ್ಧಿ ಸ್ಮೃತಿ ಮಾಲೆ ಕೃತಿಗಳು, ೭ ಸಹೃದಯಗೋಷ್ಠಿ ಕೃತಿಮಾಲೆಯ ಕೃತಿಗಳು, ೬ ದಶಮಾನೋತ್ಸವ ಸ್ಮೃತಿಯಕೃತಿಗಳು, ೬ ಎಂ.ವಿ.ಸೀ. ಸಾಹಿತ್ಯ ಮಾಲೆ ಗ್ರಂಥಗಳು, ೫ ದ್ವಿದಶಮಾನೋತ್ಸವ ಸುವರ್ಣ ಕರ್ನಾಟಕ ಮಾಲೆ ಕೃತಿಗಳು ೭ ವಿಚಾರ ಗೋಷ್ಠಿ ಮಾಲೆಯ ಕೃತಿಗಳು ಮತ್ತು ಎಚ್. ಎಸ್. ಪಾರ್ವತಿಯವರ ಚಿಂತನ ಮಂಥನ, ಕೈವಾರ ರಾಜಾರಾಯರ ನವದಂಪತಿಗಳು, ಕೌಂಡಿನ್ಯ ಅವರ ಜಾಬಾಲಾ, ಬಾಳ, ವಿ. ಸೀ. ಸಂಪದ ಅವರ ಕಾವ್ಯಶಾಸ್ತ್ರ ವಿನೋದ ಗ್ರಂಥಮಾಲೆ ದಾನವಾಗಿ ಬಂದಿದ್ದು ಇದರ ಮೂಲದಿಂದ ಬಂದ ಹಣವನ್ನು ಪ್ರತಿಷ್ಠಾನಕ್ಕೆ ನೀಡಿರುತ್ತಾರೆ. ಅದೇ ರೀತಿ ಪ್ರೊ. ಎಂ.ವಿ.ಸೀ. ಅವರ ಶೃಂಗಾರ ವಿಹಾರ, ಹಿತಚಿಂತನ, ಪ್ರತಿಮಾಗೃಹ, ಗೀತ ಭಾರತಿ,

ಮೊದಲ ಹೆಜ್ಜೆ, ಮಾದನಮಗಳು, ಕಾವ್ಯಾಲಾಪ ಗ್ರಂಥಗಳು ಸಹ ದಾನ ರೂಪದಲ್ಲಿ ಪ್ರತಿಷ್ಠಾನದ ಪ್ರಕಟಣೆಯಾಗಿ ಅವರ ಲಾಭಾಂಶವು ಪ್ರತಿಷ್ಠಾನಕ್ಕೆ ಸೇರಿದೆ. ಇದೇ ಸಾಲಿಗೆ ಸಮೇತಹಳ್ಳಿ ರಾಮರಾಯರ ಶಾಂತಲಾ, ಶಿಲ್ಪ ಸಂಗೀತ, ತಲಕಾಡುಗೊಂಡ, ಪರಶುರಾಮ, ಈಸಬೇಕು, ಉದಯೋದ್ಯಾನ, ಶ್ರೀಕೃಷ್ಣ ಮಾನಸ ಕೃತಿಗಳು ಸೇರುತ್ತವೆ. ಪರಂಪರೆಯನ್ನು ಮುಂದುವರೆಸಿ ಪ್ರತಿಷ್ಠಾನವು 'ನಲವತ್ತರ ನಲಿವು' ಕಾರ್ಯಕ್ರಮದ ಸಂದರ್ಭದಲ್ಲಿ ಶ್ರೀ ಕೌಸ್ತುಭ ಮತ್ತು ಲೋಚನ ದೀಪ್ತಿ ಕೃತಿಗಳನ್ನುಪ್ರಕಟಿಸುವುದರ ಜೊತೆಗೆ ಪ್ರತಿಷ್ಠಾನದ ಈಗಿನ ಗೌರವ ಅಧ್ಯಕ್ಷರಾಗಿರುವ ಡಾ. ಪಿ.ವಿ.ನಾರಾಯಣ ಅವರ ಪೂರ್ವಿಕರಾದ ಪ್ರಧಾನ ವೆಂಕಾಮಾತ್ಯನ ರಾಮಾಯಣದ ಯುದ್ಧಕಾಂಡ ಸಂಪುಟವನ್ನು ಪ್ರತಿಷ್ಠಾನದ ಮೂಲಕ ಪ್ರಕಟಿಸಿ ಅದರ ವೆಚ್ಚವನ್ನು ತಾವೇ ಭರಿಸಿ ಮಾರಾಟದ ಲಾಭಾಂಶವನ್ನು ಪ್ರತಿಷ್ಠಾನಕ್ಕೆ ನೀಡಿದ್ದಾರೆ. ಹಾಗೆಯೇ ಎಂ.ವಿ.ಸೀ. ಅವರ ಮಗ ಶ್ರೀ ಎಂ. ಎಸ್. ರಾಮಪ್ರಸಾದ್ ಅವರು ಅರ್ಚನ ಕೃತಿಯನ್ನು ಮರುಮುದ್ರಿಸಿ ಪ್ರತಿಷ್ಠಾನದ ಮೂಲಕ ಪ್ರಕಟಿಸಿ ಲಾಭಾಂಶವನ್ನು ವಾಡಿಕೆಯಂತೆ ಪ್ರತಿಷ್ಠಾನಕ್ಕೆ ನೀಡಿದ್ದಾರೆ. ಸದ್ಯದಲ್ಲಿ ಶಾ. ಬಾಲುರಾಯರನ್ನು ಕುರಿತ ಕೃತಿಯು ಲೋಕಾರ್ಪಣೆಯಾಗಲಿದೆ. ಶ್ರೀ ಬಿ. ಆರ್. ರವೀಂದ್ರನಾಥ್ ಅವರ ಸಂಪಾದಕತ್ವದಲ್ಲಿ ಬರುತ್ತಿರುವ ಈ ಕೃತಿಯು ಶಾ. ಬಾಲುರಾವ್ ಅವರ ಕೃತಿಗಳು ಮತ್ತು ವ್ಯಕ್ತಿತ್ವವನ್ನು ಪರಿಚಯಿಸುತ್ತಿರುವ ಬಿ.ಎಂ.ಶ್ರೀ ಪ್ರತಿಷ್ಠಾನದ ಪ್ರಕಟಣೆಯಾಗಿ ಸಿದ್ಧವಾಗುತ್ತಿದೆ. ಹಾಗೆ ೯೫ ಕೃತಿಗಳನ್ನು ಮೀರಿ ಪ್ರಕಟಣೆ ಮಾಡಿರುವ ಈ ಸಂಸ್ಥೆ ಸರ್ಕಾರದ ಧನಸಹಾಯ, ದಾನಿಗಳ ಉದಾರವಾದ ಧನಸಹಾಯ, ಸ್ಥಾಪಿತ ನಿಧಿಗಳ ಬಡ್ಡಿಯ ಮೂಲಕ ಎಲ್ಲಾ ಚಟುವಟಿಕೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದೆ ಎಂಬುದು ಸಂತೋಷದ ವಿಚಾರ.

ಬಿ.ಎಂ.ಶ್ರೀ ಪ್ರತಿಷ್ಠಾನದ ಸಾಹಿತ್ಯಾತ್ಮಕ ಕಾರ್ಯ ವೈಖರಿಯನ್ನು ಮನಗಂಡ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಧನ ಸಹಾಯ ನೀಡಿ ಇಂತಹ ಸಂಸ್ಥೆಗಳ ಸೇವೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಮನೋಭಾವವನ್ನು ಪ್ರೋತ್ಸಾಹಿಸುತ್ತಿತ್ತು. ಆದರೆ ಮೊದಮೊದಲು ವರ್ಷಕ್ಕೆ ೧೦,೦೦,೦೦೦/– ಲಕ್ಷ ಧನಸಹಾಯ ನೀಡುತ್ತಿದ್ದ ಇಲಾಖೆ (ಸರ್ಕಾರ) ೫,೦೦,೦೦೦/–ಕ್ಕೆ ಇಳಿಕೆ ಮಾಡಿ, ನಂತರ ೨,೦೦,೦೦೦/ –ನೀಡಿ ಕಳೆದ ಎರಡು ವರ್ಷಗಳಲ್ಲಿ ಧನಸಹಾಯ ನೀಡದೇ ಇದ್ದಾಗ ಅಧ್ಯಕ್ಷರು ಅನೇಕ ಬಾರಿ ಸಚಿವರು ಮತ್ತು ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ವಿಚಾರಗಳನ್ನು ಮನವರಿಕೆ ಮಾಡಿಕೊಟ್ಟ ಮೇಲೆ ಇನ್ನೇ ಪಟ್ಟಿಯಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನದ ಹೆಸರು ಸೇರ್ಪಡೆಯಾಗಿ ೨,೫೦,೦೦೦/–ರೂ.ಗಳು ಧನ ಸಹಾಯ ರೂಪದಲ್ಲಿ ಖಾತೆಗೆ ಬಂದಿತು ಎಂಬ ನೆಮ್ಮದಿಯಲ್ಲಿದೆ. ಆದರೆ ಹೀಗೆ ಸರ್ಕಾರ ಇದ್ದಕ್ಕಿದ್ದಂತೆ ಸಹಾಯ ಮಾಡುವುದನ್ನು ನಿಲ್ಲಿಸಿದರೆ ಈ ಮಟ್ಟಿಗೆ ಬೆಳೆದು ನಿಂತಿರುವ ಸಂಸ್ಥೆಯ ಮುಂದಿನ ಗತಿಯೇನು? ಎಂಬ ಚಿಂತೆ ಕಾಡುತ್ತದೆ. ಅದಕ್ಕಾಗಿಯೇ ಸರ್ಕಾರದ ಮೊರೆಹೋಗಿ ನಿರಂತರವಾಗಿ ಸಹಾಯ ನೀಡಿ ಅಥವಾ ಸರ್ಕಾರದಿಂದ ನಮ್ಮ ಪ್ರತಿಷ್ಠಾನಕ್ಕೆ ಶಾಶ್ವತನಿಧಿಯನ್ನು ಸ್ಥಾಪಿಸಿ ಅದರಿಂದ ಬರುವ ಬಡ್ಡಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿ ಆಶಯಕ್ಕೆ ಅನುಗುಣವಾಗಿ ನಡೆಸಲು ಅನುಕೂಲ ಮಾಡಿ ಕೊಡಿ ಎಂದು ಅಧ್ಯಕ್ಷರು, ಕಾರ್ಯದರ್ಶಿ, ಪದಾಧಿಕಾರಿಗಳು ಮತ್ತು ಹಿತೈಷಿಗಳು ಒತ್ತಾಯ ಮಾಡುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿದೆ.

ಒಟ್ಟಿನಲ್ಲಿ ನಮ್ಮ ಪರಂಪರೆಯ ಅರಿವನ್ನು, ಉಳಿಸಿ ವಿಸ್ತರಿಸುತ್ತ ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡು ಬರುತ್ತಿರುವ ಬಿ.ಎಂ.ಶ್ರೀ. ಪ್ರತಿಷ್ಠಾನ ಎಂದೂ ಮತ, ಧರ್ಮ, ಪಂಥಗಳತ್ತ ಹೊರಳದೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಅಭಿವೃದ್ಧಿಗಾಗಿ ಸದಾ ಶ್ರಮಿಸುತ್ತಾ ಸಾಗಿಬಂದಿದೆ. ಈಗ ೭೫೦ ಸದಸ್ಯರನ್ನು ಒಳಗೊಂಡು ಡಾ. ಪಿ. ವಿ. ನಾರಾಯಣ ಗೌರವ ಅಧ್ಯಕ್ಷರು, ಡಾ. ಬೈರಮಂಗಲ ರಾಮೇಗೌಡ ಅಧ್ಯಕ್ಷರು, ಡಾ. ಶಾಂತರಾಜು ಗೌರವ ಕಾರ್ಯದರ್ಶಿ, ಡಾ. ಪ್ರಭಾಕರ ಬೆಲವಾಡಿ ಗೌರವ ಕೋಶಾಧಿಕಾರಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಮೂಲಕ ಸಾರ್ವಜನಿಕರ ಸಲಹೆ, ಸಹಕಾರ, ಪ್ರೋತ್ಸಾಹದೊಡನೆ ತನ್ನ ಗಟ್ಟಿ ಹೆಜ್ಜೆಗಳನ್ನಿಡುತ್ತಾ ಸಾಗುತ್ತಿದೆ.

■■